SHRI RAM CHANDRA MISSION®
For Private Circulation Only
ECHOES INDIA
May 2013 Volume 6, Issue 3

# ಪೂಜ್ಯ ಬಾಬೂಜಿ ಮಹಾರಾಜರ 114ನೇ ಜಯಂತಿಯ ಉತ್ಸವಾಚರಣೆ





ನಮ್ಮ ಪ್ರಿಯ ಗುರುದೇವರು ಮತ್ತೊಮ್ಮೆ ನಮ್ಮ ಮೇಲೆ ತನ್ನ ಚಿರಂತನ ಪ್ರೇಮವನ್ನು ವರ್ಷಿಸಿದ್ದು ಇದೀಗ ತಾನೇ ತಿರುಪ್ಪೂರಿನ ಡೈಮಂಡ್ ಜುಬಿಲಿ ಪಾರ್ಕ್‌ನಲ್ಲಿ ಮುಕ್ತಾಯಗೊಂಡ, ಪೂಜ್ಯ ಬಾಬೂಜಿ ಮಹಾರಾಜರ 114ನೇ ಜನ್ಮದಿನಾಚರಣೆಯಲ್ಲಿ ಸಂಸ್ಥೆಯನ್ನು ಇನ್ನೊಂದು ಮೈಲಿಗಲ್ಲಿನಾಚೆಗೆ ಕರೆದೊಯ್ದಿದ್ದಾರೆ.

ಸೋದರ ಕಮಲೇಶ್‌ರವರು 26ರಂದು ತಿರುಪ್ಪೂರಿಗೆ ಆಗಮಿಸಿದರು. ಆಗಲೇ ಸಿದ್ಧವಾಗಿದ್ದ ಕೆಲವು ಸೌಲಭ್ಯಗಳನ್ನು ಅವರು ಉದ್ಘಾಟಿಸಿದರು. ಅಂದಿನಿಂದ 29ರವರೆಗೆ, ಪ್ರತಿದಿನ ಬೆಳಿಗ್ಗೆ 6.30 ಗಂಟೆಗೆ, 11.00 ಗಂಟೆಗೆ ಮತ್ತು ಸಾಯಂಕಾಲ 5.30 ಗಂಟೆಗೆ ಮೂರು ಸತ್ಸಂಗಗಳಿದ್ದವು. 27 ಮತ್ತು 28ರಂದು ರಾತ್ರಿ 9.00 ಗಂಟೆಗೆ ಎಲ್ಲ ಸ್ವಯಂಸೇವಕರಿಗಾಗಿ ವಿಶೇಷ ಸತ್ಸಂಗಗಳಿದ್ದವು. ಮೇ 28ರಂದು ರವಿವಾರ ಬೆಳಗಿನ ಸತ್ಸಂಗದ ನಂತರ ಸೋ. ಕಮಲೇಶ್ ಅವರು ಐದು ವಿವಾಹಗಳನ್ನು ನೆರವೇರಿಸಿದರು.

26ರ ನಂತರ ಅಭ್ಯಾಸಿಗಳು ಗುಂಪು ಗುಂಪಾಗಿ ಬರಲಾರಂಭಿಸಿದರು ಮತ್ತು ಉತ್ಸವಕ್ಕಾಗಿ ಎಲ್ಲ ಸೌಲಭ್ಯಗಳು ಸರ್ವಸನ್ನದ್ಧವಾಗುವಂತಾಗಲು ಸ್ವಯಂಸೇವಕರನ್ನು ಸೇರಿಕೊಂಡರು. ಗುಡಾರಗಳು, ಭೋಜನಶಾಲೆ, ಪಾಕಶಾಲೆ, ಭದ್ರತೆ, ನೀರಿನ ಪೂರೈಕೆ, ನೈರ್ಮಲ್ಯ, ಉಪಾಹಾರ ಮಂದಿರ, ಚಿಣ್ಣರ ಕೇಂದ್ರ, ಪ್ರಕಾಶನಾ ಮಳಿಗೆಗಳು ಇತ್ಯಾದಿಗಳು ಸಿದ್ಧವಾದವು ಮತ್ತು ಅಭ್ಯಾಸಿಗಳ ವಿವಿಧ ಅಗತ್ಯಗಳನ್ನು ಪೂರೈಸಲು ತೊಡಗಿದವು. ಅಭ್ಯಾಸಿಗಳು ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಲ್ಲಿ ಕೆಲಸಗಳಲ್ಲಿ ತೊಡಗಿಕೊಂಡರು ಮತ್ತು ಒಂದು ಪುಟಾಣಿ ಹೇಳಿದಂತೆ, "ಸ್ವಯಂ ಸೇವಕರು ತಮ್ಮ ಹೃದಯಗಳಿಂದ ಕೆಲಸ ಮಾಡುವುದನ್ನು ನಾನು ಕಂಡೆ."



ನಮ್ಮ ಭಂಡಾರಗಳು ಆಧ್ಯಾತ್ಮಿಕ ವೈಭವದ ಸಂದರ್ಭಗಳಾಗಿವೆ. ಅವು ನಮಗೆ ಪ್ರಾಪಂಚಿಕ ಸರಳತೆ ಮತ್ತು ಆಧ್ಯಾತ್ಮಿಕ ಭವ್ಯತೆಯ ಜೀವನವೊಂದನ್ನು ಬದುಕಲು ಕಲಿಸುತ್ತವೆ. ಭಂಡಾರದ ಮೊದಲದಿನ ಎಪ್ರಿಲ್ 29ರಂದು ಸೋ. ಕಮಲೇಶ್‌ರವರು ನೀಡಿದ ಭಾಷಣವು ಈ ಅಂಶವನ್ನೇ ಪ್ರತಿಪಾದಿಸಿತ್ತು. ಅವರು ವ್ಹಿಸ್ಪರ್ಸ್‌ನಿಂದ ಬಾಬೂಜಿಯವರ ಎರಡು ಸಂದೇಶಗಳನ್ನು ಓದಿದರು ಮತ್ತು ಮಾನುಕುಲದ ಪುನರುತ್ಥಾನದ ಭವ್ಯ ಯೋಜನೆಯಲ್ಲಿ ಅಭ್ಯಾಸಿಯ ಪಾತ್ರವನ್ನು ವಿಶದಪಡಿಸಿದರು.



29ರಂದು, ಮರುದಿನ ವೀಡಿಯೊ ಮೂಲಕ ಗುರುಗಳ ನಿರೀಕ್ಷಿತ ಭಾಷಣದ ಪ್ರಸಾರವಾಗುವುದೆಂಬ ಪ್ರಕಟಣೆ ಹೊರಬಿದ್ದಾಗ ಅಭ್ಯಾಸಿಗಳ ಹರ್ಷವು ದೃಗ್ಗೋಚರವಾಗುತ್ತು. ಅಲ್ಲಿಂದ ನಂತರ ಗುರುಗಳು ಯಾವಾಗ ಧ್ಯಾನಮಂದಿರದಲ್ಲಿ ಆ ಬೃಹತ್ ಪರದೆಗಳ ಮೇಲೆ ಕಾಣಿಸಿಕೊಳ್ಳುವರೆಂಬ ಆ ಕ್ಷಣದವರೆಗೆ ಕಾಲವು ನಿಲ್ಲದೆ ಓಡಿತು. ಕೊನೆಗೂ ಗುರುಗಳು ಮಣಪಾಕ್ಕಂನ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ಧ್ಯಾನಮಂದಿರವನ್ನು ಪ್ರವೇಶಿಸಿದಾಗ ಅಭ್ಯಾಸಿಗಳೆಲ್ಲರ ಹೃದಯಗಳು ಪ್ರೇಮಭರಿತವಾಗಿ ಕಣ್ಣುಗಳು ನೀರಕೊಳಗಳಾಗಿದ್ದವು. ಅದು ಪ್ರೇಮ ಮತ್ತು ಕೃತಜ್ಞತೆಗಳ ಅಪೂರ್ವ ಕ್ಷಣವಾಗಿತ್ತು. ತರುವಾಯದ ಸತ್ಸಂಗ ಮತ್ತು ಆ ದಿನ ಬಾಬೂಜಿ ಮಹಾರಾಜರಿತ್ತ ವಿಶೇಷ ಸಂದೇಶವು ಮಿಷನ್ ಮತ್ತು ಎಲ್ಲ ಅಭ್ಯಾಸಿಗಳ ಮೇಲಿರುವ ದೈವೀ ಲಕ್ಷ್ಯವನ್ನು ಮತ್ತೆ ನಮಗೆ ನೆನಪಿಸಿತ್ತು. ಬಾಬೂಜಿಯವರು ತನ್ನ ಸಂದೇಶದಲ್ಲಿ, "ಹೃದಯದ ಸಂಪೂರ್ಣ ಬದ್ಧತೆ ಮತ್ತು ಅದನ್ನು ಬೆಂಬಲಿಸುವ ಕಷ್ಟವಿಲ್ಲದ ಆದರೆ ಕ್ರಮಬದ್ಧವಾದ ಸಾಧನೆ ಮಾತ್ರವೇ ಆಧ್ಯಾತ್ಮಿಕ ಹೃದಯವನ್ನು ಅದರ ಅತ್ಯುನ್ನತವಾದ ಗುರಿಗೆ ಏರಿಸುತ್ತದೆ." ಎಂದಿದ್ದಾರೆ.

28ರಂದು ನಡೆದ ವಿವಾಹಗಳಲ್ಲದೆ ಸೋ. ಕಮಲೇಶ್‌ರವರು 29ರಂದು 4 ವಿವಾಹಗಳನ್ನು, 30ರಂದು 3 ವಿವಾಹಗಳನ್ನು ಮತ್ತು ಎಪ್ರಿಲ್ 1ರಂದು 4 ವಿವಾಹಗಳನ್ನು ನೆರವೇರಿಸಿದರು. ಈ ವಿವಾಹಗಳು ಸಹಜಮಾರ್ಗ ರೀತಿಯಲ್ಲಿದ್ದು ಸರಳತೆಯನ್ನು ಬಿಂಬಿಸುತ್ತಿವೆ ಮತ್ತು ಸಂಸ್ಕೃತಿಗಳ ಮತ್ತು ಭಾಷೆಗಳ ಗಡಿಗಳನ್ನು ಮೀರಿ ಕುಟುಂಬಗಳನ್ನು ಒಟ್ಟುಗೂಡಿಸುವ ವಿಧಾನವಾಗಿದೆ.

ಈ ವರ್ಷದ ಆಧ್ಯಾತ್ಮಿಕ ಉತ್ಸವದಲ್ಲಿ 33,000 ಅಭ್ಯಾಸಿಗಳು ಮತ್ತು ಮಕ್ಕಳು ಪಾಲ್ಗೊಂಡಿದ್ದಾರೆ. ಈ ಪ್ರಮಾಣದ ಕುಟುಂಬವೊಂದು ಮೂರುದಿನಗಳ ಕಾಲ ಹರ್ಷದಿಂದ ಇದ್ದು, ತಮ್ಮ ಗುರು ನೂರಾರು ಮೈಲಿಗಳ ದೂರದಲ್ಲಿದ್ದು ಅವರನ್ನು ಹೃದಯದಿಂದ ಹೃದಯಕ್ಕೆ ದಿಗ್ದರ್ಶಿಸುತ್ತಿದ್ದು ಉತ್ಸವ ಕ್ಷೇತ್ರದ ಸಮರ್ಪಿತ ತಂಡಕ್ಕೆ ಧನ್ಯವಾದಗಳು. ಇಲ್ಲವಾದರೆ ಒಂದು ದಿನಕ್ಕೆ ಸರಾಸರಿ 25,000 ಮಂದಿಗೆ





ಮೂರು ಹೊತ್ತಿನ ಆಹಾರವನ್ನು ಏನೂ ವ್ಯರ್ಥವಾಗದಂತೆ ತಯಾರಿಸುತ್ತಿದ್ದ ಪಾಕಶಾಲೆಯನ್ನು ಏನೆಂದು ವರ್ಣಿಸುವುದು? ಉತ್ಸವಕ್ಷೇತ್ರದಲ್ಲಿ ಇಪ್ಪತ್ತಮೂರು ಭದ್ರತಾ ಕೋಠಿಗಳಿದ್ದು ಅಲ್ಲಿಂದ ನಮ್ಮ ಅಭ್ಯಾಸಿ ಸೋದರರು ದಿನಕ್ಕೆ ಮೂರು ಪಾಳಿಯಂತೆ ಕೆಲಸ ಮಾಡುತ್ತಿದ್ದರು. ವಾಸ್ತವ್ಯ ಸೌಲಭ್ಯವನ್ನೊದಗಿಸುವ ತಂಡವು ಸುಮಾರು ಎರಡು ತಿಂಗಳುಗಳ ಮೊದಲೇ ಪ್ರಥಮತಃ ಕಾರ್ಯಪ್ರವೃತ್ತವಾಗಿದ್ದು, ನಮ್ಮ ಸೀಮಿತ ಸಂಪನ್ಮೂಲಗಳಿಗೆ ಹೊಂದಿಕೆಯಾಗುವಂತೆ ನಮ್ಮ ವಾಸ್ತವ್ಯವು ಆರಾಮದಾಯಕವಾಗುವಂತೆ ಮಾಡಿತ್ತು. ಉತ್ಸವಕ್ಷೇತ್ರದಲ್ಲಿ, ವಿಶೇಷತಃ ಪಾಕಶಾಲೆ ಮತ್ತು ಕ್ಯಾಂಟೀನ್‌ಗಳಲ್ಲಿ ನೊಣಗಳ ಗೈರುಹಾಜರಿ ಎದ್ದು ಕಾಣುತ್ತಿತ್ತು. ನಮಗೆ ಆರೋಗ್ಯಪೂರ್ಣ ಮತ್ತು ಆರಾಮದಾಯಕ ವಾಸ್ತವ್ಯವನ್ನೊದಗಿಸಲು ನೈರ್ಮಲ್ಯದಳ, ಸ್ವಚ್ಛತಾ ಮತ್ತು ಮನೆವಾರ್ತೆಯ ತಂಡಗಳು ಪರಸ್ಪರ ಹೊಂದಾಣಿಕೆಯಿಂದ ದುಡಿದವು. ನಮ್ಮ ಆರಾಮಕರ ವಾಸ್ತವ್ಯವನ್ನು ದೃಢಿಕರಿಸುವುದಕ್ಕೋಸ್ಕರ ಅವರು ನಿದ್ರಾರಹಿತ ರಾತ್ರಿಗಳನ್ನು ಕಳೆದರು ಮತ್ತು ತಮ್ಮ ವಿಶ್ರಾಂತಿಯ ಸಮಯವನ್ನು ಸಾವಯವ ರೊಚ್ಚು ತೊಟ್ಟಿಯ ದ್ರಾವಣ, ಶುದ್ಧಿಕಾರಕಗಳು, ಪ್ರತ್ಯೇಕಿಸಲ್ಪಟ್ಟ ನಿರುಪಯುಕ್ತ ವಸ್ತುಗಳು ಇರುವ ಪೀಪಾಯಿಗಳ ನಡುವೆ ಕಳೆದರು. 2012ರ ಭಂಡಾರದಲ್ಲಿ ವೈದ್ಯಕೀಯ ಸೌಲಭ್ಯ ಕೇಂದ್ರದಲ್ಲಿ ಕರುಳಿನ ಉರಿಯೂತದ 202














ವಿದ್ಯಮಾನಗಳು ದಾಖಲಿಸಲ್ಪಟ್ಟಿದ್ದರೆ ಈ ವರ್ಷ ಅಂಥ ಕೇವಲ 102 ವಿದ್ಯಮಾನಗಳು ದಾಖಲಿಸಲ್ಪಟ್ಟಿರುವುದು ಅವರ ಕಠಿಣ ದುಡಿಮೆಗೆ ಸಾಕ್ಷಿಯಾಗಿದೆ. ಮತ್ತೊಂದು ಕಾರಣವೆಂದರೆ ಖಔ ವಿಧಾನದಿಂದ ಕುಡಿಯುವ ನೀರಿನ ಶುದ್ಧೀಕರಣ. ತಿರುಪ್ಪೂರಿನ ಉಷ್ಣ ವಾತಾವರಣದಲ್ಲಿ, ಖಔ ಶುದ್ಧೀಕರಿಸಿದ ಲಕ್ಷ ಲೀ. ನೀರನ್ನು ಕುಡಿಯಲು ಹಾಗು 24 ಲಕ್ಷ ಲೀ. ನೀರನ್ನು ಇತರೆ ಕಾರ್ಯಗಳಿಗಾಗಿ ಮೂರು ದಿನಗಳಲ್ಲಿ ಬಳಸಲಾಯಿತು. ವೈ-ಫೈ ಸೌಲಭ್ಯ ಹೊಂದಿದ ಟ್ರಾವಲ್ ಡೆಸ್ಕ್ ಹನ್ನೆರಡು ಕೌಂಟರ್‌ಗಳನ್ನು ಹೊಂದಿದ್ದು, ಅಭ್ಯಾಸಿಗಳ ಪ್ರಯಾಣದ ಅಗತ್ಯಗಳಿಗೆ ಸ್ಪಂದಿಸಿದುದನ್ನು ಯಾರೂ ಮರೆಯಲಾರರು.




ಉತ್ಸವದಲ್ಲಿ ಅನೇಕ ನವೀನ ಪ್ರಕಟನೆಗಳನ್ನು ಬಿಡುಗಡೆಗೊಳಿಸಲಾಯಿತು. ಕೆಲವು ವಿಶೇಷವಾದವು, ಕೆಲವು ಹೊಸ ಪುಸ್ತಕಗಳು ಮತ್ತು ಡಿವಿಡಿಗಳಾದರೆ, ವಿವಿಧ ಭಾಷೆಗಳಲ್ಲಿ ಅನೇಕ ಪುನರ್ಮುದ್ರಣಗೊಂಡ ಪುಸ್ತಕಗಳ ಬಿಡುಗಡೆ ಮಾಡಲಾಯಿತು. ಮಿಷನ್ನಿನ ಪ್ರಕಟನೆಗಳಿಂದ ಅಪಾರ ಮತ್ತು ವೈವಿಧ್ಯಮಯ ಆಯ್ಕೆಯ ಅವಕಾಶವಿದ್ದಿತು. ಭಾವಚಿತ್ರ ಭಂಡಾರದಲ್ಲಿ ಸುಂದರ ಚೌಕಟ್ಟು ಹಾಕಲ್ಪಟ್ಟ ಗುರು ಮಹಾರಾಜರ ಚಿತ್ರಗಳು ಲಭ್ಯವಿದ್ದವು.




ಹಿರಿಯರು ಸತ್ಸಂಗ ಮತ್ತು ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ಮಕ್ಕಳನ್ನು ಅವರ ವಯೋಮಾನಕ್ಕನುಗುಣವಾಗಿ ವ್ಯಸ್ತರನ್ನಾಗಿರಿಸಲಾಗಿತ್ತು. ಮೊದಲ ಬಾರಿಗೆ 12–17 ವಯಸ್ಸಿನ ಮಕ್ಕಳಿಗಾಗಿ ಕಾರ್ಯಕ್ರಮವನ್ನು ರಚಿಸಲಾಗಿತ್ತು. ಭಂಡಾರದ ಯಶಸ್ಸಿನ ಹಿಂದಿನ ಶ್ರಮ ತಿಳಿಸಲೆಂದು ಅವರನ್ನು ಆವರಣದಲ್ಲಿ ವಿವಿಧ ವಿಭಾಗಗಳಿಗೊಯ್ದು ಅವರ ಕಾರ್ಯವಿಧಾನವನ್ನು ಪರಿಚಯಿಸಲಾಯಿತು.



ಸೋ. ಕಮಲೇಶ್‌ರವರು ವಲಯ ಮತ್ತು ಕೇಂದ್ರ ಸಂಚಾಲಕರು ಹಾಗು ದಾಖಲೆ ತಂಡದ ಸಭೆಯಲ್ಲಿ ಮಾತನಾಡಿದರು. ಹಲವಾರು ಸ್ವಯಂಸೇವಾ ತಂಡಗಳಿಗೆ ಮುಂದಿನ ಕೆಲ ತಿಂಗಳುಗಳ ಯೋಜನೆಯನ್ನು ಚರ್ಚಿಸಲು ಪರಿಪೂರ್ಣ ಅವಕಾಶ ದೊರಕಿದಂತಾಯಿತು.

ಸರ್ವರ ಸುಖಮಯ ವಾಸ್ತವ್ಯಕ್ಕಾಗಿ ಅನೇಕರು ಹಗಲು-ರಾತ್ರಿ ಪರಿಶ್ರಮಿಸಿದ್ದಾರೆ. ವಾಸ್ತವವಾಗಿ, ಉತ್ಸವದಲ್ಲಿ ನಡೆದುದೆಲ್ಲವೂ ವರ್ಣಿಸಲಸದಳ. ಸೋ. ಕಮಲೇಶ್‌ರವರು ಮುಕ್ತಾಯ ಸಮಾರಂಭದ ಭಾಷಣದಲ್ಲಿ, ಗುರುಗಳ ಸಂಕಲ್ಪ ಪೂರೈಸಲು ಯಾರ ಗಮನಕ್ಕೂ ಬರದಂತೆ ಮೌನವಾಗಿ ಕಾರ್ಯನಿರ್ವಹಿಸುವ ಅಂತಹ ದೇವದೂತರಿಗೆಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು. ಈ ವರ್ಷ ಗುರುಗಳ ಹುಟ್ಟುಹಬ್ಬವನ್ನು ತಿರುಪ್ಪೂರಿನಲ್ಲಿ ಆಚರಿಸಲಾಗುವುದೆಂದು ಕೊನೆಯ ದಿನ ಪ್ರಕಟಿಸಿದಾಗ ಆ ಆನಂದ ನೂರ್ಮಡಿಯಾಯಿತು. ಪೂಜ್ಯ ಗುರುಗಳು ನಮ್ಮೆಲ್ಲರ ಹೃದಯವನ್ನು ಪ್ರೇಮದಿಂದ ಭರಿಸುವ ಸಮಯವು ಪುನಃ ಸನ್ನಿಹಿತವಾಗುತ್ತಿದೆ.





## ಫೆಬ್ರುವರಿ 2013

ಗುರುಗಳು ತುಂಬಾ ಕಾರ್ಯನಿರತರಾಗಿದ್ದರು ಫಲವಾಗಿ ತೀರಾ ಬಳಲಿದ್ದರು ಕೂಡ. ಪ್ರತಿದಿನ ಅವರು ಮೂರು ಪ್ರಶಿಕ್ಷಕ ಬೈಠಕ್‌ಗಳನ್ನು ಕೊಡುತ್ತಿದ್ದರು ಮತ್ತು ಹೆಚ್ಚಿನ ದಿನಗಳಲ್ಲಿ ಅವರು ಸುತ್ತಲಿದ್ದ ಅಭ್ಯಾಸಿಗಳಿಗೂ ಒಂದು ಬೈಠಕ್ ಕೊಡುತ್ತಿದ್ದರು. ಇದರ ಹೊರತಾಗಿ ಅವರು ತನ್ನ ಶಾರೀರಿಕ ವೇದನೆಗೆ ಫ್ರಾನ್ಸ್‌ನ ಸೋ. ಪಿಯರೆ ಅವರಿಂದ ಕೆಲ ಚಿಕಿತ್ಸೆಯನ್ನೂ ಪಡೆದುಕೊಳ್ಳುತ್ತಿದ್ದು ಇದು ಅವರ ಶರೀರಕ್ಕೆ ಆರಾಮ ನೀಡಲು ಸಹಾಯ ಮಾಡಿತ್ತು. ಕಾರ್ಯ ಮತ್ತು ಆರೋಗ್ಯದ ಎಲ್ಲ ಒತ್ತಡಗಳ ನಡುವೆ ಗುರುಗಳು ಖಖುಿಕ ಯಲ್ಲಿ ಭಾಗವಹಿಸಿದ ಸುಮಾರು ಐವತ್ತು ಮಂದಿಯನ್ನು ಗಾಯತ್ರಿಗೆ ಆಮಂತ್ರಿಸಲು ಸಮಯವನ್ನು ಕಂಡುಕೊಂಡಿದ್ದರು.

ಗುರುಗಳು ಐಒಔಖಷ 12ನೇ ತರಗತಿಯ ವಿದ್ಯಾರ್ಥಿಗಳನ್ನು ಕೂಡ ಆಮಂತ್ರಿಸಿದ್ದರು ಮತ್ತು ವಿಷಯಗಳನ್ನು ಬಾಯಿಪಾಠ ಮಾಡುವುದಲ್ಲ, ಬದಲಾಗಿ ಅರಗಿಸಿಕೊಳ್ಳಬೇಕು, ಎಂಬ ಅಂಶದ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳು ಯಾವುದು ಅಗತ್ಯವೋ ಅದರ ಬೆಲೆಕಟ್ಟಲು ಮತ್ತು ಅದನ್ನು ಅರಗಿಸಿಕೊಳ್ಳಲು ಹೃದಯವನ್ನು ಉಪಯೋಗಿಸಬೇಕು ಮತ್ತು ಅನಗತ್ಯವಾದುದನ್ನು ತಿರಸ್ಕರಿಸಬೇಕು. ಶಿಕ್ಷಕರು ಈ ಪ್ರತಿಯೊಂದು ವಿವರದಲಿ ್ಲಯೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವೀಯಬೇಕು ಎಂದರು.

ಓರ್ವ ಅಭ್ಯಾಸಿಯು ತಾನು ಶುದ್ಧೀಕರಣ ಮಾಡಿದಾಗ ಆತನ ಶರೀರದ ಮೂಲಕ ಒಂದು ವಿದ್ಯುದಾಘಾತ ಹಾದುಹೋದಂತೆ ಅನಿಸಿತು ಮತ್ತು ಈ ಅನುಭವದಿಂದ ಭಯಗೊಂಡೆ ಎಂದು ತನ್ನ ಅನುಭವವನ್ನು ಹೇಳಿದಾಗ ಗುರುಗಳು, “ಈ ಭಯಪಡುವ ಅಗತ್ಯವಿಲ್ಲ. ನೋಡಿ, ಪ್ರತಿಯೊಬ್ಬನೂ ಒಂದಲ್ಲ ಒಂದುದಿನ ಸಾಯಲೇ ಬೇಕು. ಅದು ಅನಿವಾರ್ಯ ಹೀಗಿರುವಾಗ ನಾವು ಯಾವುದರ ಬಗ್ಗೆಯಾದರೂ ಏಕೆ ಭಯಪಡಬೇಕು?” ಎಂದರು.

## ಮಾರ್ಚ್ 2013

ಗುರುಗಳು ಮಾರ್ಚ್ ಆರಂಭದಿಂದ ಗಾಯತ್ರಿಯಲ್ಲಿ ಉಳಿದುಕೊಂಡಿದ್ದು ಕುಟೀರದ ಕೆಲಸ ಕೊನೆಯ ಘಟ್ಟಕ್ಕೆ ಸಮೀಪಿಸುತ್ತಿದೆ. ಕೆಲಸದ ಮೇಲ್ವಿಚಾರಣೆ ನಡೆಸಲು ಸೋ. ಕೃಷ್ಣ ನಿಯತವಾಗಿ ಕುಟೀರಕ್ಕೆ ಭೇಟಿ ಕೊಡುತ್ತಿದ್ದಾರೆ. ಕುಟೀರದ ಸುತ್ತಲಿನ ಉದ್ಯಾನದಲ್ಲಿ ಒಂದು ದೊಡ್ಡ ತಂಡವೂ ಕೆಲಸ ಮಾಡುತ್ತಿತ್ತು.

ಹೆಚ್ಚಿನ ಅಪರಾಹ್ನಗಳಲ್ಲಿ ಗುರುಗಳು ‘ಉಪನಿಷದ್ ಗಂಗಾ’ ಎಂಬ ಟಿ.ವಿ. ಧಾರಾವಾಹಿಯ ಕಂತುಗಳನ್ನು ನೋಡುತ್ತಿದ್ದಾರೆ. ಅವರು ಈ ಸರಣಿಯಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು ಇವು ಉತ್ತಮ ವಸ್ತು ಮಾತ್ರವಲ್ಲ, ಇವನ್ನು ಅತ್ಯುತ್ತಮವಾಗಿ ನಿರ್ದೇಶಿಸಲಾಗಿದೆ ಎಂಬ ಅನಿಸಿಕೆ ವ್ಯಕ್ತಪಡಿಸಿದ್ದರು. ಮಾರ್ಚ್ 14ರ ಗುರುವಾರ, ಗುರುಗಳಿಗೆ ಅತೀವ ಕಾಲುನೋವು ಕಂಡುಬಂದಿದ್ದು ಅವರನ್ನು ಸ್ಕಾನ್‌ಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅವರಿಗೆ ಕನಿಷ್ಠಪಕ್ಷ 2–3 ದಿನಗಳ ವರೆಗೆ ನಡೆದಾಡುವುದು ಬೇಡವೆಂದು ಸಲಹೆ ನೀಡಲಾಯಿತು. ಮತ್ತು ನೋವು ನಿವಾರಕಗಳನ್ನು ಕೊಡಲಾಯಿತು.



## ಪುನರ್ನವೀಕೃತ ಕುಟೀರದ ಉದ್ಘಾಟನೆ

ಮಾರ್ಚ್ 22ರ ಶುಕ್ರವಾರ, ಗುರುಗಳು ಪೂರ್ವಾಹ್ನ 8.30ರ ಹೊತ್ತಿಗೆ ಧ್ಯಾನ ಮಂದಿರಕ್ಕೆ ಬಂದರು. ಅನೇಕ ಅಭ್ಯಾಸಿಗಳು ಇನ್ನೂ ಬಂದು ಸೇರುತ್ತಲೇ ಇದ್ದುದರಿಂದ ಗುರುಗಳು ತಾಳ್ಮೆಯಿಂದ ಸುಮಾರು 15 ನಿಮಿಷಗಳ ಕಾಲ ಕಾದು ಆಮೇಲೆ ಸುಮಾರು 50 ನಿಮಿಷಗಳ ಅವಧಿಯ ಸತ್ಸಂಗವನ್ನು ನಡೆಸಿಕೊಟ್ಟರು. ಒಂದು ವಿವಾಹ ನಿಶ್ಚಿತಾರ್ಥವನ್ನು ನಡೆಸಿಕೊಟ್ಟ ನಂತರ, ಗುರುಗಳು ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಆನಂತರ ಅವರು ಕುಟೀರಕ್ಕೆ ನಡೆದರು. ಕುಟೀರವನ್ನು ಪ್ರವೇಶಿಸುತ್ತಿದ್ದಂತೆ, “ನಾನು ಈ ಕುಟೀರದಿಂದ ಹೊರನಡೆದು ಆರು ತಿಂಗಳುಗಳೇ ಆದುವು” ಎಂದರು. ಅವರು ರಿಬ್ಬನ್ ಕತ್ತರಿಸಿ ಹಜಾರದ ನಡುವೆ ಒಂದು ದೀಪವನ್ನು ಹಚ್ಚಿಟ್ಟರು. ತನ್ನ ಮಲಗುಮನೆಯಲ್ಲಿ ಅವರು ಪ್ರಸಾದವನ್ನು ಅರ್ಪಿಸಿ, ಅಲ್ಲಿಉಪಸ್ಥಿತರಿದ್ದ ಎಲ್ಲರಿಗೂ ಹಂಚಿದರು. ಓರ್ವ ಸೋದರಿ, ತನ್ನ ಈ ಮೂವತ್ತನೇ ಹುಟ್ಟುಹಬ್ಬಕ್ಕೆ ತನಗೆ ವಯಸ್ಸಾದಂತೆ ಅನಿಸಿದೆಯೆಂದರು. ಗುರುಗಳೆಂದರು, “ನನಗೆ ನಿನ್ನ ಮೂರರಷ್ಟು ವಯಸ್ಸಾಗಿದೆ ಮತ್ತು ನನಗೆ ಇನ್ನೂ ಎಳೆಯನಂತೆನಿಸುತ್ತಿದೆ. ವಯಸ್ಸಿನೊಂದಿಗೆ ವಿವೇಕ ಬರುತ್ತದೆ. ನನಗೆ ವಯಸ್ಸಾಗಿದೆಯೆಂದು ಅನಿಸುತ್ತಿಲ್ಲ. ಶರೀರಕ್ಕೆ ಮಾತ್ರ ವಯಸ್ಸಾಗಿದೆ.” ಅಮೆರಿಕಾದಿಂದ ಬಂದ ಇನ್ನೊಬ್ಬ ಅಭ್ಯಾಸಿಯು, “ದೈಹಿಕ ಅಗಲಿಕೆಯನ್ನು ನಾನು ಹೇಗೆ ನಿಭಾಯಿಸಲಿ?” ಎಂದು ಕೇಳಿದಾಗ ಗುರುಗಳು, “ನೀನು ಏಕಾಂಗಿಯಾಗಿರುವಾಗೆಲ್ಲ ಗುರು ನಿನ್ನ ನೇರ ಎದುರಿನಲ್ಲಿರುವನೆಂದು ಭಾವಿಸು.” ಎಂದರು. ಅಭ್ಯಾಸಿಯು, “ನಾನು ಹಾಗೆ ಯೋಚಿಸಬಲ್ಲೆ, ಆದರೆ ಅದು ನಿಜವಿರಬಹುದೆ ಎಂಬುದರ ಬಗ್ಗೆ ನನಗೆ ಸಂಶಯವೇಳುತ್ತದೆ.” ಎಂದರು. ಆಗ ಗುರುಗಳು, “ಇದು ಪಾಶ್ಚಿಮಾತ್ಯ ಅಭ್ಯಾಸಿಗಳ ಸಮಸ್ಯೆ. ಸಂಶಯವು ಬುದ್ಧಿಮತ್ತೆಯಿಂದ ಏಳುತ್ತದೆ. ವಿಜ್ಞಾನಿಯು ಪರಮಾಣು ಇದೆ ಎಂದಾಗ ನೀವು ಅದನ್ನು ನಂಬುವಿರಿ. ನೀವು ಅದನ್ನೇಕೆ ಸಂಶಯಿಸುವುದಿಲ್ಲ? ನೀವು ಪರಮಾಣುವನ್ನು ಎಂದಾದರೂ ನೋಡಿರುವಿರಾ? ಇದೇ ವಿಜ್ಞಾನ ಮತ್ತು ಅಧ್ಯಾತ್ಮದ ನಡುವಿನ ಭಿನ್ನತೆಯಾಗಿದ್ದು ನಾವು ವಿಜ್ಞಾನ ಹೇಳುವುದನ್ನು ನಂಬುತ್ತೇವೆ ಮತ್ತು ಅಧ್ಯಾತ್ಮವನ್ನು ಸಂಶಯಿಸುತ್ತೇವೆ.” ಎಂದರು.

## ಅಷ್ಟಾಂಗ ಯೋಗ ಮತ್ತು ಸಹಜಮಾರ್ಗ

ಮಾರ್ಚ್ 27ರ ಬುಧವಾರ ಹೋಳಿಹಬ್ಬವಾಗಿದ್ದು ಗುರುಗಳು ಬಳಲಿದ್ದರೂ ಉಲ್ಲಾಸದಿಂದ ತುಂಬಾ ಅಭ್ಯಾಸಿಗಳನ್ನು ಭೇಟಿಯಾದರು. ಅದು ಭಾರ್ಗವನ ಹುಟ್ಟುಹಬ್ಬವೂ ಆಗಿದ್ದು ಗುರುಗಳ ಕುಟುಂಬದ ಸದಸ್ಯರು ಸುಮಾರು 8.00 ಗಂಟೆಗೆ ಆಗಮಿಸಿದರು. ಗುರುಗಳು ತನ್ನ ಕಛೇರಿಯಲ್ಲಿ ಪ್ರಸಾದವನ್ನು ಸಮರ್ಪಿಸಿ, ಸತ್ಸಂಗವನ್ನು ನಡೆಸಿಕೊಟ್ಟರು. ಅಪರಾಹ್ನ ಗುರುಗಳು ‘ಉಪನಿಷತ್ ಗಂಗಾ’ದ ಎರಡು ಕಂತುಗಳನ್ನು ನೋಡಿದರು. ಆನಂತರ ಪಾರಂಪರಿಕ ಅಷ್ಟಾಂಗ ಯೋಗದಿಂದ ಸಹಜಮಾರ್ಗವು ಹೇಗೆ ವಿಕಸನ ಹೊಂದಿತು ಎಂಬುದರ ಬಗ್ಗೆ ಚರ್ಚೆ ನಡೆಯಿತು. ಗುರುಗಳು ಹೀಗೆಂದರು:



*“ಯಮ ಮತ್ತು ನಿಯಮಗಳನ್ನು ಮನೆಯಲ್ಲಿ ಹೆತ್ತವರಿಂದ ಮತ್ತು ಶಾಲೆಯಲ್ಲಿ ಶಿಕ್ಷಕರಿಂದ ಕಲಿಯಬೇಕು. ಆಸನ ಮತ್ತು ಪ್ರಾಣಾಯಾಮಗಳು– ನಾವು ಧ್ಯಾನ ಮಾಡುವಾಗ ಉಸಿರಾಟವು ತನ್ನಷ್ಟಕ್ಕೆ ಸಹಜವಾಗಿ ಕ್ರಮಬದ್ಧಗೊಳ್ಳುತ್ತದೆ. ಆಳವಾದ ಧ್ಯಾನದಲ್ಲಿರುವಾಗ ಕೆಲವೊಮ್ಮೆ 2–3 ನಿಮಿಷಗಳ ಕಾಲ ನೀವು ಉಸಿರಾಡುವುದಿಲ್ಲ. ಆಕಾರಣ ಅದು ಅಪ್ರಯತ್ನವಾಗಿರುತ್ತದೆ. ಆಗ, ಬಿಟ್ಟುಬಿಡುವುದು, ಸಾಧಿಸುವುದು ಎಲ್ಲವೂ ಹೋಗುತ್ತದೆ. ಧ್ಯಾನವನ್ನು, ನಾವು ಮಾಡುತ್ತೇವೆ. ಸಮಾಧಿಯೆಂದರೆ, ಅದು ಪಾಷಾಣತುಲ್ಯ ಸ್ಥಿತಿಯುಳ್ಳ, ಯೋಗದ ಸಮಾಧಿಯಲ್ಲ, ಬದಲಾಗಿ ಪ್ರಾರಂಭದಲ್ಲಿದ್ದ ಆಂತರಿಕ ಸ್ಥಿತಿಯಾಗಿದೆ. ಪ್ರಾರಂಭ ಎಂದರೆ, ‘ಎಲ್ಲ ಕಾಲದ ಆರಂಭ’. ಆದ್ದರಿಂದ, ಅದನ್ನೇ ಸಹಜಮಾರ್ಗ ಕಲಿಸುತ್ತದೆ. ಮತ್ತು ನೀವು ಧ್ಯಾನದ ಆಳಕ್ಕೆ ಇಳಿದಾಗ, ಅದರ ಸಂವೇದನೆ ಹೊಂದುವಿರಿ. ಉದಾಹರಣೆಗೆ, ಇಂದು ಬೆಳಗಿನ ಧ್ಯಾನದಲ್ಲಿ, ನಾನು ತತ್‌ಕ್ಷಣವೇ ಎಲ್ಲೋ ಹೋಗಿದ್ದೆ. ನಾನು, ‘ದಯವಿಟ್ಟು ಶುರುಮಾಡಿ’ ಎಂದು ಹೇಳಿದಾಕ್ಷಣ, ನಾನು ಎಲ್ಲೋ ಇದ್ದೆ. ನಾನು ಹೇಳುತ್ತಿದ್ದ ಹಾಗೆ, ಮಹಾ ಸಮಾಧಿ ಎಂದರೇನೆಂಬುದು ಈಗ ನನಗರ್ಥವಾಗುತ್ತಿದೆ ಏಕೆಂದರೆ ಧ್ಯಾನದಲ್ಲಿ, ನೀವು ಎಂದಿಗೂ ಮರಳಿ ಬಾರದಿರುವ ಹಾಗೆ ಹೋಗಿಯೇ ಬಿಡಬಹುದು. ಆದರಿಂದ ಹೊರಬರುವುದು ಹೆಚ್ಚು ಹೆಚ್ಚು ಕಷ್ಟವಾಗುತ್ತದೆ. ಕೆಲವೊಮ್ಮೆ ನಾನು ಬೈಠಕ್‌ಗಳನ್ನು ಆರಂಭಿಸುವಾಗ, ಒಂದು ಗಂಟೆ ಕಳೆದುಹೋಗಿರುತ್ತದೆ ಮತ್ತು ನನಗೆ ಅದು ಕೆಲವೇ ಕ್ಷಣಗಳಂತೆ ಭಾಸವಾಗುತ್ತದೆ. ಮತ್ತು ಎರಡು ಅಥವಾ ಮೂರು ಸಂದರ್ಭಗಳಲ್ಲಿ, ನನಗೆ ‘ಮುಗಿಯಿತು’ (ಖಿಚಿಣ’ ಚಿಟಟ) ಎನ್ನಲೆ ಅಥವಾ ‘ದಯವಿಟ್ಟು ಶುರುಮಾಡಿ’ (ಞಟಜಚಿಜ ಛಿಜಟಿ) ಎನ್ನಲೆ ಎಂಬ ಗೊಂದಲವೂ ಉಂಟಾಗಿತ್ತು. ಹಾಗಾಗಿ ನಾನು ಕಣ್ಣು ತೆರೆದೆ ಮತ್ತು ಎಲ್ಲರೂ ಧ್ಯಾನ ಮಾಡುತ್ತಿರುವುದನ್ನು ನೋಡಿದೆ ಮತ್ತು ‘ಖಿಚಿಣ’ ಚಿಟಟ’ ಎಂದೆ.*

ಮೊದಲ ವಾರ ನವ ಕುಟೀರದಲ್ಲಿ ಗುರುಗಳು ತನ್ನ ಊಟಕ್ಕಾಗಿ ಭೋಜನಶಾಲೆಗೆ ಹೋಗುವ ಪ್ರಯತ್ನ ಮಾಡುತ್ತಿದ್ದರು, ಆದರೆ ಆನಂತರ ತನ್ನ ಕೋಣೆಯಲ್ಲೇ ಊಟಮಾಡಲಾರಂಭಿಸಿದರು. ಅವರಿಗೆ ಕಾಲು ನೋವಿದ್ದು ವಿಶೇಷವಾಗಿ ಅವರ ವಾಯುವಿಹಾರ ಸಮಯದಲ್ಲಿ ಅವರು ತಿರುಗಿದಾಗ ಅವರ ಮೊಣಕಾಲುಗಳಲ್ಲಿ ನೋವು ತೀರಾ ತೀವ್ರವಾಗಿರುತ್ತಿತ್ತು.

## ಅಭ್ಯಾಸಿಗಳೊಂದಿಗೆ ಮಿಶ್ರ ಅನುಭವಗಳು

ಒಂದು ದಿನ ಪೂನಾದ ಓರ್ವ ಸೋದರಿ ಗುರುಗಳನ್ನು ಭೇಟಿಯಾಗಲು, ಪಶುವೈದ್ಯಶಾಸ್ತ್ರದಲ್ಲಿ ಶಸ್ತ್ರವೈದ್ಯಳಾಗಲು ಓದುತ್ತಿದ್ದ ತನ್ನ ಮಗಳೊಂದಿಗೆ ಬಂದರು. ಆಕೆಯ ಓದಿನಲ್ಲಿ ತುಂಬ ಆಸಕ್ತಿ ತೋರಿದ ಗುರುಗಳು ಆಕೆ ಮಾಡಿದ ವಿವಿಧ ಶಸ್ತ್ರಚಿಕಿತ್ಸೆಗಳ ಬಗ್ಗೆ ಪ್ರಶ್ನಿಸುತ್ತಿದ್ದರು.

ಜಬಲ್‌ಪುರ್ ಮತ್ತು ಗಂಜ್‌ಬಸೋದಾದಿಂದ ಅಭ್ಯಾಸಿಗಳು ಗುರುಗಳನ್ನು ಭೇಟಿಯಾಗಲು ಬಂದಿದ್ದಾರೆಂದು ಗುರುಗಳಿಗೆ ತಿಳಿಸಲಾಗಿತ್ತು. ಗುರುಗಳು ಸಂತೋಷದಿಂದ, ಅದು ನನ್ನ ಕೇಂದ್ರ– ಜಬಲ್‌ಪುರ ಎಂದರು ಮತ್ತು ಆ ಅಭ್ಯಾಸಿಗಳನ್ನು ಸಾಯಂಕಾಲ 5.00 ಗಂಟೆಗೆ ಬರಹೇಳಿದರು. ಅಭ್ಯಾಸಿಗಳು ಬಂದು ಸೇರುವ ಮೊದಲೇ ಗುರುಗಳು ತಯಾರಾದರು ಮತ್ತು ಸ್ವಯಂಸೇವಕರು ಅವರ ಗಾಲಿಕುರ್ಚಿಯನ್ನು ಸಿದ್ಧಪಡಿಸಲು ಓಡಬೇಕಾಗಿ ಬಂತು. ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು ಆಮೇಲೆ ಅವರನ್ನು ನೋಡಲು ಅಲ್ಲಿ ನೂಕುನುಗ್ಗಲು ಉಂಟಾಯಿತು. ಅದು ತೀರಾ ಅನಿಯಂತ್ರಿತವಾಗಿದ್ದು ಗುರುಗಳು ತಳಮಳಗೊಳ್ಳುತ್ತಿರುವುದು ಸ್ಪಷ್ಟವಾಗಿತ್ತು. ಲಘು ಉಪಾಹಾರವನ್ನು ಹಂಚಲಾಯಿತು. ಗುರುಗಳ ಪಾದಸ್ಪರ್ಶ ಮಾಡುವುದು ಬೇಡವೆಂದು ಮತ್ತೆ ಮತ್ತೆ ನಿವೇದಿಸಿಕೊಂಡರೂ ಮತ್ತೆಯೂ ಎಲ್ಲ ಅಭ್ಯಾಸಿಗಳು ಹಾಗೆ ಮಾಡಬಯಸಿದ್ದರು. ಇಂಥ ಘಟನೆಗಳಿಂದ ನಾವು ಪಾಠ ಕಲಿತುಕೊಂಡು ಗುರುಗಳ ಸಮ್ಮುಖದಲ್ಲಿ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ನಮ್ಮಲ್ಲಿ ಬದಲಾವಣೆಯನ್ನು ತಂದುಕೊಳ್ಳುವುದು ತುಂಬ ಅಗತ್ಯವಾಗಿದೆ.

## ಮಾರ್ಚ್ 31, 2013 ರವಿವಾರ

ಅದು ಆರ್ಥಿಕ ವರ್ಷದ ಕೊನೆಯ ದಿನವಾಗಿದ್ದ ಕಾರಣ ಗುರುಗಳು ತುಂಬ ಅವಿಶ್ರಾಂತರಾಗಿದ್ದರು. ಲೆಕ್ಕಿಗ ತಂಡದೊಂದಿಗಿನ ಅವರ ಆಪ್ತ ಸಮಾಲೋಚನೆ ಸುಮಾರು ಮೂರುಗಂಟೆಗಳನ್ನು ತೆಗೆದುಕೊಂಡಿತ್ತು. ಭೋಜನಾನಂತರ ಗುರುಗಳು ಕೂಡಲೇ ಗಾಯತ್ರಿಗೆ ತೆರಳಿದರು. ಕುಟೀರದಲ್ಲಿ ಕೆಲವು ವಸ್ತುಗಳನ್ನು ಜೋಡಿಸುವ ಅಗತ್ಯವಿದ್ದ ಕಾರಣ ಅವರು ಕೆಲವು ದಿನಗಳ ಕಾಲ ಗಾಯತ್ರಿಯಲ್ಲಿ ಉಳಿದುಕೊಂಡರು. ಮೊಮ್ಮಗಳು ಮಾಧುರಿಯೂ ಚೆನ್ನೈನಲ್ಲಿ ಇದ್ದ ಕಾರಣ ಗುರುಗಳು ಸ್ವಲ್ಪ ಸಮಯ ಆಕೆಯೊಂದಿಗೆ ಕಳೆಯಲು ನಿರ್ಧರಿಸಿದರು. ಅವರ ಕಾರ್ಯಕ್ರಮ ಎಷ್ಟೇ ಅವಿಶ್ರಾಂತ ಮತ್ತು ಕಠಿಣವಾಗಿದ್ದರೂ ಸಮತೋಲನದ ಜೀವನವನ್ನು ಬದುಕುವುದು ಹೇಗೆ ಎಂಬುದನ್ನು ಅವರು ನಮಗೆ ತೋರಿಸುತ್ತಾರೆ ಮತ್ತು ತನ್ನ ಕುಟುಂಬದ ಬಗ್ಗೆ ಅವರ ಗಮನವು ನಮಗೆಲ್ಲ ಅನುಸರಿಸಲು ಒಂದು ನಿದರ್ಶನವಾಗಿದೆ.

## ಎಪ್ರಿಲ್ 2013

ಗಾಯತ್ರಿಯಲ್ಲಿರುವಾಗ, ರಾಜಕಾರಣಿಗಳು ಹೇಗೆ ಸ್ವಾರ್ಥಿಗಳಾಗಿ ತಮ್ಮ ಅದಿ ಕಾರವನ್ನು ಬಳಸಿಕೊಳ್ಳುತ್ತಾರೆಂಬುದರ ಬಗ್ಗೆ ಮಾತುಕತೆ ನಡೆದಿತ್ತು. ಇತ್ತೀಚೆಗಿನ ಕೆಲವು ಘಟನೆಗಳನ್ನು ಕೇಳಿ ಗುರುಗಳಿಗೆ ಜಿಗುಪ್ಸೆ ಉಂಟಾಗಿತ್ತು. ಭ್ರಷ್ಟಾಚಾರದ ಬಗ್ಗೆ ಮತ್ತು ಅತ್ಯುನ್ನತ ಹುದ್ದೆಯ ಅಧಿಕಾರಿಗಳು ತಮ್ಮ ಅದಿ ಕಾರದ ದುರ್ಬಳಕೆ ಮಾಡಿಕೊಳ್ಳುವುದರ ಬಗ್ಗೆ ಗುರುಗಳು ತೀರಾ ಅಸಂತುಷ್ಟರಾಗಿದ್ದರು ಮತ್ತು ಇದು ಹೆಚ್ಚು ಹೆಚ್ಚು ಲಂಗು ಲಗಾಮಿಲ್ಲದಂತಾಗುತ್ತಿದೆ ಎಂದು ಅವರು ಹೇಳುತ್ತಿದ್ದರು.

ಒಂದು ದಿನ ಚೆರೋಕಿ (ಅಮೆರಿಕನ್ ಇಂಡಿಯನ್) ಅಮೆರಿಕಾದ ಮೂಲನಿವಾಸಿ)ಯ ಸೋದರಿಯೊಬ್ಬರು ಗಾಯತ್ರಿಗೆ ಬಂದಿಳಿದರು. ಆಕೆ ಆಗ ತಾನೇ ಆರಂಭಿಕ ಬೈಠಕ್‌ಗಳನ್ನು ತೆಗೆದುಕೊಂಡಿದ್ದು ಗುರುಗಳನ್ನು ಭೇಟಿಯಾಗಲು ಬಂದಿದ್ದರು. ಗುರುಗಳೆಂದರು, “ನೀವು ಮೊತ್ತ ಮೊದಲ ಅಮೆರಿಕನ್ ಇಂಡಿಯನ್ ಅಭ್ಯಾಸಿ. ನನ್ನ ಪಕ್ಕಕ್ಕೆ ಬನ್ನಿ. ನಾನು ನಿಮ್ಮನ್ನು ನೋಡ ಬಯಸುತ್ತೇನೆ.” ಗುರುಗಳು ಆಕೆಯ ಕಣ್ಣುಗಳೊಳಗೆ ಆಳವಾಗಿ ನೋಡಿದರು. ಆಕೆ ತನ್ನ ಹೆಸರು ಗಾಯತ್ರಿ ಎಂದರು. ಗುರುಗಳು ವಿವರಿಸಿದರು, “ನನ್ನ ಮಗ ಕೃಷ್ಣ ಐದು ವರ್ಷದವನಿದ್ದಾಗ ನಾವು ಈ ಮನೆಯನ್ನು ನಿರ್ಮಿಸಿದೆವು. ಆಗ ಅದು ನಮ್ಮ ಸಹಜಮಾರ್ಗದ ಅಭ್ಯಾಸದ ಮೊದಲಾಗಿತ್ತು ಮತ್ತು ಆಗ ನಾವು ಗಾಯತ್ರಿ ಮಂತ್ರದ ಅಭ್ಯಾಸ ಮಾಡುತ್ತಿದ್ದೆವು. ಹಾಗಾಗಿ ಈ ಮನೆಗೆ ಆ ಹೆಸರನ್ನು ಇಟ್ಟೆವು.” ಗುರುಗಳು ಆಕೆಯಲ್ಲಿ ಆಕೆಯ ನಿಜವಾದ ಇಂಡಿಯನ್ ಹೆಸರನ್ನು ಕೇಳಿದರು. ಆಕೆ,

“ನಾನು ಚಿಕ್ಕವಳಿರುವಾಗ ನನ್ನನ್ನು ‘ಲಿಟ್ಲ್ ಡಿಯರ್(ಜಿಂಕೆ ಮರಿ)’ ಎಂದು ಕರೆಯುತ್ತಿದ್ದರು” ಎಂದರು. ಗುರುಗಳು ತನ್ನ ಸುತ್ತಲಿನ ಅಭ್ಯಾಸಿಗಳನ್ನು ಆಕೆಗೆ ಪರಿಚಯಿಸಿದರು ಮತ್ತು ಆಕೆಗೆ ನಿಸ್ಸಂಕೋಚದ ಭಾವನೆ ಉಂಟಾಗುವಂತೆ ಮಾಡಿದರು.

ವೃದ್ಧ ದಂಪತಿಯೊಂದು ಗುರುಗಳಲ್ಲಿಗೆ ಬಂದು ತಮ್ಮ ಮಗ ಅಮೆರಿಕಾದಲ್ಲಿದ್ದು ಭಾರತಕ್ಕೆ ಬರಲು ಇಚ್ಛಿಸುತ್ತಿಲ್ಲವೆಂದೂ ಅದರಿಂದಾಗಿ ಆತನನ್ನು ಭೇಟಿಯಾಗಲು ತಾವು ಅಲ್ಲಿಗೆ ಹೋಗುತ್ತಿದ್ದೇವೆಂದೂ ಹೇಳಿದರು. ಗುರುಗಳು ತಳಮಳಗೊಂಡು ತಾನು ಇದನ್ನು ಖಂಡಿತಾ ಒಪ್ಪುವುದಿಲ್ಲವೆಂದು ಹೇಳಿದರು, “ಇದು ನಿಮಗೆ ನನ್ನ ಸೂಚನೆ ಆದರೆ ನೀವು ಏನು ಮಾಡಬಯಸುತ್ತೀರಿ ಎಂಬುದನ್ನು ನೀವೇ ನಿಶ್ಚಯಿಸಿಕೊಳ್ಳಬಹುದು.” ಇಂಥ ನೇರವಾದ ಸೂಚನೆಗಳನ್ನು ಗುರುಗಳು ನೀಡುವುದು ತೀರ ಅಪರೂಪ.

ಈ ವಾರ ಗುರುಗಳು ತನ್ನ ಮೊಮ್ಮಗಳು ಮಾಧುರಿಯೊಂದಿಗೆ ಧಾರಾಳ ಸಮಯವನ್ನು ಕಳೆದರು. ಒಂದು ದಿನ ಅವರು ಆಕೆಯನ್ನು ಒಂದು ಮಾಲ್ (ವ್ಯಾಪಾರ ಕೇಂದ್ರ)ಗೆ ಕರೆದುಕೊಂಡು ಹೋಗಿ ಆಕೆಗೆ ಉಡುಗೊರೆಗಳನ್ನು ಕೊಟ್ಟರು. ಗುರುಗಳು ಉಡುಗೊರೆಗಳನ್ನು ಹೇಗೆ ಮಾಡುತ್ತಾರೆ ಎಂಬುದನ್ನು ನೋಡುವುದು ಕುತೂಹಲಕಾರಿಯಾಗಿದೆ. ಅವರು ಕುಟುಂಬಕ್ಕೆ ಉಡುಗೊರೆಗಳನ್ನು ಕೊಂಡರು ಮತ್ತು ತೀರಾ ಕರಾರುವಾಕ್ಕಾಗಿ ಕೊಂಡವಸ್ತುಗಳ ರಶೀದಿಗಳೆಲ್ಲವನ್ನು ಜಾಗ್ರತೆಯಾಗಿ ತೆಗೆದಿಟ್ಟುಕೊಳ್ಳುವಂತೆ ನೋಡಿಕೊಂಡರು ಮತ್ತು ಉಡುಗೊರೆಗಳನ್ನು ಆನಂತರ ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ ನೀಡಿದರು.

ಅವರು ಮಾಡುವ ಪ್ರತಿಯೊಂದರಲ್ಲೂ ಸಂಪೂರ್ಣ ಗಮನ, ಮಾರ್ದವತೆ ಮತ್ತು ಪ್ರೇಮಗಳಿರುತ್ತವೆ.

ಎಪ್ರಿಲ್ 12ರ ಶುಕ್ರವಾರ ಮಾಧುರಿ ಲಂಡನ್ ಗೆ ಹೊರಟ ನಂತರ ಗುರುಗಳು ಮಣಪಾಕ್ಕಂನ ಕುಟೀರಕ್ಕೆ ಬಂದರು. ಅವರಿಗೆ ಬಲಕಾಲು ಮತ್ತು ಬಲಗೈಯಲ್ಲಿ ಎಡೆಬಿಡದೆ ನೋವು ಇದೆ. ಎಪ್ರಿಲ್ 17ರ ಬುಧವಾರ ಗುರುಗಳು ಮಣಪಾಕ್ಕಂನ ಒಖಔಖ ಆಸ್ಪತ್ರೆಗೆ ಒಖಖ ಸ್ಕ್ಯಾನ್‌ಗಾಗಿ ಹೋಗಿದ್ದು ಅದು ಕೆಲಸಮಯದ ರೇಡಿಯೇಶನ್ ಚಿಕಿತ್ಸೆ ಬೇಕಾಗುವ ಸ್ಥಿತಿಯನ್ನು ಹೊರಗೆಡವಿತು ಎನ್ನಲಾಗಿದೆ. ಎಲ್ಲೆಡೆಯೂ ಒಂದು ದುಃಖದ ವಾತಾವರಣ ಕವಿದಿತ್ತು. ಆದರೆ ಗುರುಗಳು ಎಪ್ರಿಲ್ 20ರ ರವಿವಾರ ಸತ್ಸಂಗ ನಡೆಸಿಕೊಡಲು ಧ್ಯಾನ ಮಂದಿರಕ್ಕೆ ಆಗಮಿಸಿ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿಸಿದರು. ತದನಂತರ ಅವರು ಸೋ. ಚಕ್ರಪಾಣಿಯವರ ತಮಿಳು ಭಾಷಣದುದ್ದಕ್ಕೂ ಕುಳಿತಿದ್ದರು. ಅವರ ಅನಾರೋಗ್ಯವು ಅವರನ್ನು ಅವರ ನಿತ್ಯದ ಕೆಲಸದಿಂದ, ಅದು ಆಧ್ಯಾತ್ಮಿಕವಿರಲಿ ಅಥವಾ ಆಡಳಿತಾತ್ಮಕವಿರಲಿ, ವಿಚಲಿತಗೊಳಿಸಲಿಲ್ಲ. ನೋವು ಮತ್ತು ಅನನುಕೂಲದ ಹೊರತಾಗಿಯೂ ಗುರುಗಳು ಪ್ರತಿಯೊಂದನ್ನೂ ಮಂದಹಾಸದೊಂದಿಗೆ ಎದುರಿಸುತ್ತಿದ್ದು ಎಂದಿನಂತೆ ತೇಜೋಮಯರಾಗಿ ಕಾಣಿಸುತ್ತಿದ್ದಾರೆ. ಅಖ ಸ್ಕ್ಯಾನ್ ಸಮಸ್ಯೆಯನ್ನು ಪುನಃ ದೃಢೀಕರಿಸಿದೆ. ನಾವೆಲ್ಲರೂ ಈ ಆತಂಕವು ಬೇಗನೆ ದೂರವಾಗಿ ನಮ್ಮ ಪ್ರಿಯ ಗುರುದೇವ ತನ್ನ ಉತ್ತಮ ಆರೋಗ್ಯ ಮತ್ತು ಬಲಗಳನ್ನು ಮತ್ತೆ ಪಡೆಯುತ್ತಾರೆಂದು ಪ್ರಾರ್ಥಿಸೋಣ.

## ಉತ್ತರ ಕರ್ನಾಟಕದ ಮುದ್ನೂರಿನಲ್ಲಿ ಹೊಸ ಕೇಂದ್ರ

ಉತ್ತರ ಕರ್ನಾಟಕದಲ್ಲಿನ ಚಾರಿತ್ರಿಕ ಮಹತ್ವವುಳ್ಳ, ಜಲನಿಧಿಯ ಸ್ಥಾನವೆನಿಸಿದ ಮುದ್ನೂರಿನಲ್ಲಿ ಹೊಸ ಕೇಂದ್ರವೊಂದು ಆರಂಭವಾಗಿದೆ. ಓರ್ವ ಅಭ್ಯಾಸಿಯ ನಿವಾಸದಲ್ಲಿ ಸುಮಾರು ಹದಿನೈದು ಮಂದಿ ಅಭ್ಯಾಸಿಗಳು ನಿಯತವಾಗಿ ರವಿವಾರದ ಸತ್ಸಂಗಕ್ಕೆ ಹಾಜರಾಗುತ್ತಿದ್ದಾರೆ. ವೈಯಕ್ತಿಕ ಬೈಠಕ್‌ಗಳನ್ನು ನೀಡಲು ಹತ್ತಿರದ ಸ್ಥಳಗಳಿಂದ ಪ್ರಶಿಕ್ಷಕರು ಈ ಕೇಂದ್ರಕ್ಕೆ ನಿಯತವಾಗಿ ಭೇಟಿಕೊಡುತ್ತಿದ್ದಾರೆ.

ಮಾರ್ಚ್ 31ರಂದು ಮುದ್ನೂರಿನ ಶಾಲಾ ಆವರಣವೊಂದರಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮವೊಂದನ್ನು ನಡೆಸಲಾಗಿತ್ತು. ಹತ್ತಿರದ ಸ್ಥಳಗಳಿಂದ ಬಂದ ಸುಮಾರು ಅರುವತ್ತು ಮಂದಿ ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬೆಳಗಿನ ಮತ್ತು ಸಾಯಂಕಾಲದ ಸತ್ಸಂಗಗಳಲ್ಲದೆ, ಸಾಧನೆಯ ಮೂಲಭೂತ ಅಂಶಗಳನ್ನು ಕೂಲಂಕುಶವಾಗಿ ವಿವರಿಸಲಾಯಿತು. ತದನಂತರ ಪ್ರಶ್ನೋತ್ತರ ವೇಳೆಯಿತ್ತು.

ಸಾಯಂಕಾಲ ಸತ್ಸಂಗದ ನಂತರ ಹಾಜರಿದ್ದ ಸುಮಾರು ಹದಿನೈದು ಮಂದಿ ಆಕಾಂಕ್ಷಿಗಳಿಗೆ ಪರಿಚಯಾತ್ಮಕ ಸಭೆಯೊಂದನ್ನು ಏರ್ಪಡಿಸಲಾಗಿದ್ದು ಆ ಸಂದರ್ಭದಲ್ಲಿ ಡಾ. ಗಜೇಂದ್ರ ಸಿಂಗ್, ಸೋ. ಮೀರಾ ಕುಲಕರ್ಣಿ ಮತ್ತು ಸೋ. ರಾಜು ಕಾಶಂಪುರ್‌ಕರ್‌ರವರು ಮಾತನಾಡಿದರು. ಒಟ್ಟಾರೆ ಪ್ರತಿಕ್ರಿಯೆಯು ತುಂಬ ಚೆನ್ನಾಗಿದ್ದು ಕೆಲವರು ಆರಂಭಿಕ ಬೈಠಕ್‌ಗಳನ್ನು ತೆಗೆದುಕೊಳ್ಳುವ ಆಶಯ ವ್ಯಕ್ತಪಡಿಸಿದರು.

## ಧ್ಯಾನಮಂದಿರದ ಉದ್ಘಾಟನೆ, ಅಹಮದ್‌ನಗರ

ವಲಯ ಸಂಚಾಲಕರಾದ ಸೋ. ಅರುಣ್ ಕುಮಾರ್ ಚೌಹಾಣ್ ರವರು ಮಾರ್ಚ್ 31, 2013ರಂದು ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಹತ್ತಿರದ ಜಿಲ್ಲೆಗಳಿಂದ ಅಭ್ಯಾಸಿಗಳು ಆಗಮಿಸಿ ವಾತಾವರಣವನ್ನು ಸಂತೋಷಭರಿತವನ್ನಾಗಿಸಿದ್ದರು. ಧ್ಯಾನಮಂದಿರವನ್ನು ಸೋ. ಖಂಡೇಶಿಯವರು ಕೊಡುಗೆಯಾಗಿ ನೀಡಿದ್ದು ಸುಮಾರು 100 ಅಭ್ಯಾಸಿಗಳಿಗೆ ಸ್ಥಳಾವಕಾಶವಿದೆ. ನಿಯತ ಚಟುವಟಿಕೆಗಳನ್ನು ಇನ್ನಷ್ಟು ಉತ್ತಮವಾಗಿ ಸಂಘಟಿಸಿ, ನಡೆಸಲು ಕೇಂದ್ರಕ್ಕೆ ಈ ಧ್ಯಾನಮಂದಿರವು ಸಹಾಯಕವಾದೀತೆಂಬ ಭರವಸೆಯಿದೆ.

ಸಮಾರಂಭವು ಬೆಳಗಿನ ಸತ್ಸಂಗಾನಂತರ ಭಜನೆಗಳೊಂದಿಗೆ ಪ್ರಾರಂಭವಾಯಿತು. ನಂತರ ‘ಭಕ್ತಿ’ಎಂಬ ವಿಷಯದ ಮೇಲೆ ಒಂದು ನಾಟಕವಿದ್ದು ಅದು ನಮ್ಮ ಸಾಧನೆಯಲ್ಲಿ ಕ್ಷಿಪ್ರ ಪ್ರಗತಿಗಾಗಿ ಭಕ್ತಿಯ ಪಾತ್ರವನ್ನು ವಿಶದಪಡಿಸಿತು. ತದನಂತರ ಪರಿಚಯಾತ್ಮಕ ಸಭೆಯೊಂದು ನಡೆದು ಅದರಲ್ಲಿ ಜೀವನದಲ್ಲಿ ಸಮತೋಲನದ ಆವಶ್ಯಕತೆ ಮತ್ತು ಸಹಜಮಾರ್ಗ ಎಂಬ ವಿಷಯವನ್ನು ವಿಶದಪಡಿಸಲಾಯಿತು. ಹೊಸ ಗ್ರಂಥಾಲಯವನ್ನು ಸೋ. ಗೀತಾಂಜಲಿ ಕಾಳೆಯವರು ಉದ್ಘಾಟಿಸಿದರು. ಊಟವಾದ ಬಳಿಕ ಕೊಡುವಿಕೆಯ ಮೌಲ್ಯದ ಬಗ್ಗೆ ಕಿರುಪ್ರಹಸನವೊಂದು ನಡೆಯಿತು. ಸಾಯಂಕಾಲದ ಸತ್ಸಂಗದೊಂದಿಗೆ ಕಾರ್ಯಕ್ರಮವು ಸಮಾಪ್ತವಾಯಿತು.





# ಅಖಿಲ ಭಾರತ ಪ್ರಬಂಧ ಕಾರ್ಯಕ್ರಮ



ಇದು UNIC ಮತ್ತು SRCM ನ ಸಹಯೋಗದಿಂದ ನಡೆಯುತ್ತಿರುವ ಕಾರ್ಯಕ್ರಮವಾಗಿದ್ದು, ಭಾರತದಾದ್ಯಂತ ವರ್ಷಕ್ಕೊಮ್ಮೆ ನಡೆಸಲಾಗುತ್ತಿದೆ. ಈ ವರ್ಷ, 9798 ಶೈಕ್ಷಣಿಕ ಸಂಸ್ಥೆಗಳಿಂದ 1,70,148 ವಿದ್ಯಾರ್ಥಿಗಳು ಭಾಗವಹಿಸಿದ್ದರು. ರಾಷ್ಟ್ರಮಟ್ಟದ ಪುರಸ್ಕಾರ ಪ್ರದಾನ ಸಮಾರಂಭವನ್ನು ಫೆಬ್ರುವರಿ 24ರಂದು ಗುರ್‌ಗಾಂವ್‌ನ ವಲಯಾಶ್ರಮದಲ್ಲಿ ಆಯೋಜಿಸಲಾಗಿತ್ತು. ಭಾರತ ಮತ್ತು ಭೂತಾನ್‌ನಲ್ಲಿ UNICನ ನಿರ್ದೇಶಕರಾದ ಶ್ರೀಮತಿ ಕಿರಣ್ ಮೆಹ್ರಾ–ಕರ್ಪೆಲ್‌ಮನ್‌ರವರು ಆದರಣೀಯ ಅತಿಥಿಗಳಾಗಿದ್ದರು. ರಾಷ್ಟ್ರಮಟ್ಟದ ವಿಜೇತರಾದ ವಿವಿಯನ್ ಆ್ಯಂಡ್ರೂಸ್ ಮತ್ತು ಸತ್ಯಾರ್ಥ್ ಶರ್ಮಾರವರು ಪ್ರಬಂಧ ಸ್ಪರ್ಧೆಯಿಂದ ತಮಗೆ ದೊರೆತ ತಮ್ಮ ಅನಿಸಿಕೆಗಳಿಂದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.




ವಲಯ ಹಾಗು ಸಂಸ್ಥಾಮಟ್ಟದ ಪುರಸ್ಕಾರಗಳನ್ನು ದೇಶದಾದ್ಯಂತ ಉತ್ಸಾಹದಿಂದ ನಡೆಸಲಾಯಿತು. ಜನತೆಗೆ ಸಹಜಮಾರ್ಗವನ್ನು ಪರಿಚಯಿಸಲು ಇವು ಮುಕ್ತಸಭೆಗಳಾದವು.



ಒರಿಸ್ಸಾದ ಭುವನೇಶ್ವರದಲ್ಲಿ, ವಿಜೇತರ ಪಾಲಕರು ಕಾರ್ಯಕ್ರಮದ ವೈಶಿಷ್ಟ್ಯತೆಯನ್ನು, ಕೇಂದ್ರದಲ್ಲಿ ತಮಗೆ ದೊರೆತ ಸಹೃದಯ ಸ್ವಾಗತವನ್ನು ಪ್ರಶಂಸಿಸಿದರು. ಮಹಾರಾಷ್ಟ್ರದ ಚಂದ್ರಪುರದಲ್ಲಿ ರಾಜ್ಯದ ಮಾಜಿ ಆರ್ಥಿಕ ಸಚಿವರಾದ ಶ್ರೀ ಶಾಂತಾರಾಂಜಿ ಪೋಟ್‌ದುಖೆರವರು ಅತಿಥಿಗಳಾಗಿದ್ದರು. ವಲಯಪ್ರಮುಖರಾದ ಸೋ. ರಾಜೇಂದ್ರನ್‌ರವರು ಜೀವನದಲ್ಲಿ ಆಧ್ಯಾತ್ಮಿಕ ಸಾಧನೆಯ ಬಗ್ಗೆ ಮಾತನಾಡಿದರು. ಝಾರ್ಖಂಡ್‌ನ ರಾಂಚಿಯಲ್ಲಿ, ಪ್ರಸಿದ್ಧ ಮೂಳೆತಜ್ಞರಾದ ಡಾ.ಅನಿಲ್ ಪಾಂಡೆರವರು ಅತಿಥಿಯಾಗಿ ಆಗಮಿಸಿದ್ದರು ಮತ್ತು ಕೇಂದ್ರಸಂಚಾಲಕರು ಪ್ರೇಕ್ಷಕರಿಗೆ ಸಹಜಮಾರ್ಗ ಪರಿಚಯವನ್ನು ಮಾಡಿಕೊಟ್ಟರು. ಹೈದರಾಬಾದಿನ ತುರ್ಮ್‌ಕುಂಟಾ ವಲಯಾಶ್ರಮದಲ್ಲಿ ಬಿಟ್ಸ್–ಪಿಲಾನಿಯ ಅಂತರರಾಷ್ಟ್ರೀಯ ಕಾರ್ಯಕ್ರಮಗಳ ಡೀನ್ ಆದ ಶ್ರೀಮತಿ ಸುಮನ್ ಕಪೂರ್‌ರವರು ರಾಷ್ಟ್ರೀಯ ಮತ್ತು ವಲಯ ಮಟ್ಟದ ವಿಜೇತರಿಗೆ ಪದಕ ಹಾಗು ಪ್ರಮಾಣಪತ್ರಗಳನ್ನು ಪ್ರದಾನಿಸಿದರು. ಆಂಧ್ರದ ಖಮ್ಮಂನಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ಸಿ.ಹೆಚ್.ವೆಂಕಟರೆಡ್ಡಿಯವರು ಮುಖ್ಯ ಅತಿಥಿಗಳಾಗಿದ್ದರು ಹಾಗು ಮೌಲ್ಯಾಧಾರಿತ ಶಿಕ್ಷಣ ಕುರಿತು ಉಪನ್ಯಾಸಗಳು ನಡೆದವು. ವಿಜಯವಾಡ ಆಶ್ರಮದಲ್ಲಿ ಕೇಂದ್ರಪ್ರಮುಖರು ಜೀವನದಲ್ಲಿ ಅಧ್ಯಾತ್ಮದ ಅಗತ್ಯತೆಯನ್ನು ಒತ್ತಿ ಹೇಳಿದರು. ತಮಿಳುನಾಡಿನ ದೇವಕೊಟ್ಟೈಯಲ್ಲಿ ವಲಯ ಮಟ್ಟ ವಿಜೇತೆ ಎಂ.ಪವಿತ್ರಾಳ ಜಯವನ್ನು ಶಾಲೆಯಲ್ಲಿ ಪುಟ್ಟ ಸಮಾರಂಭದ ಮೂಲಕ ಆಚರಿಸಲಾಯಿತು. ಗುಜರಾತಿನ ಮೆಹ್ಸಾನಾದಲ್ಲಿ ಶಾಲೆ ಮತ್ತು ಕಾಲೇಜು ಮಟ್ಟದ ವಿಜೇತರಿಗಾಗಿ ಪ್ರತ್ಯೇಕ ಸಮಾರಂಭಗಳು ನಡೆದು, ಪ್ರೇಕ್ಷಕರಿಗೆ ಸಹಜಮಾರ್ಗವನ್ನು ಪರಿಚಯಿಸಲಾಯಿತು. ರಾಜಸ್ಥಾನದಲ್ಲಿ ವಲಯ ಮಟ್ಟದ ಸಮಾರಂಭವನ್ನು ಆಲ್ವಾರ್ ಮತ್ತು ರಾಜಗಢದಲ್ಲಿ ನದೆಸಲಾಯಿತು. ಆಲ್ವಾರದಲ್ಲಿ ಪ್ರಿನ್ಸಿಪಾಲ್ ಅಕಾಡೆಮಿ ಪ್ರೌಢಶಾಲೆಯ ಪ್ರಾಚಾರ್ಯರಾದ ಶ್ರೀಮತಿ ಅಂಜನಾ ಸಹಾಯ್‌ರವರು ಮುಖ್ಯ ಅತಿಥಿಗಳಾಗಿದ್ದು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(DIET)ಯ ಪ್ರಾಂಶುಪಾಲರಾದ ಶ್ರೀ ವಿಷ್ಣು ಸ್ವಾಮಿಯವರು ಗೌರವ ಅತಿಥಿಗಳಾಗಿದ್ದರು. ಕೇರಳದ ಪಯ್ಯನೂರಿನಲ್ಲಿ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯದ ಪ್ರೊಫೆಸರ್ ಎ.ಕೆ.ಸುಧರ್ಮರವರು ಮುಂದಾಳತ್ವ ವಹಿಸಿದ್ದು, ಪ್ರಶಸ್ತಿ ಪ್ರದಾನ ಮಾಡಿದರು.






# ಗ್ರೌಂಡಿಂಗ್ ಇನ್ ಪ್ರಾಕ್ಟೀಸ್ ತರಬೇತಿ ಕಾರ್ಯಕ್ರಮಗಳು



ಭಾರತದ ಹಲವು ಕೇಂದ್ರಗಳಲ್ಲಿ ಗ್ರೌಂಡಿಂಗ್ ಇನ್ ಪ್ರಾಕ್ಟೀಸ್(GITP) ತರಬೇತಿ ಕಾರ್ಯಕ್ರಮವನ್ನು ಈ ಉದ್ದೇಶಕ್ಕಾಗಿಯೇ ತರಬೇತಿ ಪಡೆದ ನಿರ್ವಾಹಕರು ಉತ್ಸಾಹದಿಂದ ನಡೆಸಿದರು. GITP ಯಲ್ಲಿ ನಾಲ್ಕು ಭಾಗಗಳಿವೆ – ದಿನಚರಿ ಬರಹ, ಧ್ಯಾನ, ಶುದ್ಧೀಕರಣ ಮತ್ತು ಪ್ರಾರ್ಥನೆ. ಪ್ರತಿಯೊಂದನ್ನು ಪ್ರತ್ಯೇಕ ಕಾರ್ಯಕ್ರಮದಲ್ಲಿ ಪೂರ್ಣದಿನ ಚರ್ಚಿಸಲಾಗುವುದು. ಸಣ್ಣ ಗುಂಪುಗಳಲ್ಲಿ ಅಂತರ್ಚರ್ಚೆ, ಆತ್ಮನಿರೀಕ್ಷಣೆ, ಗುರುಗಳ ಉಕ್ತಿಗಳು ಮತ್ತು ವಿಸ್ಪರ್ಸ್ ಸಂದೇಶಗಳ ಮೂಲಕ ಸಾಧನೆಯ ಗುಣಮಟ್ಟವನ್ನು ಸುಧಾರಿಸುವುದು ಈ ಕಾರ್ಯಕ್ರಮದ ಉದ್ದೇಶ.



ಉ.ಪ್ರದೇಶದಲ್ಲಿ ಲಖನೌ(BMA), ಕಾನ್ಪುರ ಮತ್ತು ಮೈನ್‌ಪುರಿಯಲ್ಲಿ ಸಭೆಗಳು ನಡೆದವು. ಅಲಹಾಬಾದಿನ ಆಯೋಜಕ ತಂಡವು ಫತೇಪುರ್ ಮತ್ತು ಪ್ರತಾಪಗಢ ಕೇಂದ್ರಗಳಲ್ಲಿ ಮೂರು ದಿನದ ಕಾರ್ಯಕ್ರಮವನ್ನು ನಡೆಸಿಕೊಟ್ಟಿತು. ಒರಿಸ್ಸಾದ ಭುವನೇಶ್ವರದಲ್ಲಿ ಬರೋಡ ಕೇಂದ್ರದ ಆಯೋಜಕರು ನಡೆಸಿಕೊಟ್ಟ ಮೂರು ದಿನದ ಕಾರ್ಯಕ್ರಮದಲ್ಲಿ ಇಪ್ಪತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು.



ಹೈದರಾಬಾದಿನ ವಲಯಾಶ್ರಮದಲ್ಲಿ, ಗೋದಾವರಿ ಖನಿ, ಶ್ರೀರಾಂಪುರ, ವಾರಂಗಲ್, ಭೋಂಗಿರ್, ಬೆಲ್ಲಂಪಲ್ಲಿ, ಘನ್ಪುರ್, ಅಶ್ವಪುರ್ ಮತ್ತು ಹೈದರಾಬಾದಿನ ಅಭ್ಯಾಸಿಗಳಿಗಾಗಿ ಮೂರು ದಿನದ ಕಾರ್ಯಕ್ರಮವನ್ನು ತೆಲುಗಿನಲ್ಲಿ ನಡೆಸಲಾಯಿತು. ಹೈದರಾಬಾದಿನ ದೊಮ್ಮಲ್ಗುಡ ಆಶ್ರಮದಲ್ಲಿ, ಪ್ರತಿ ಭಾನುವಾರ ಒಂದು ದಿನದ ಕಾರ್ಯಕ್ರಮವನ್ನಾಗಿ ತೆಲುಗಿನಲ್ಲಿ ನಡೆಸಲಾಯಿತು. ವಿಜಯವಾಡದಲ್ಲಿ, ನಾಲ್ಕು ಬಾರಿ ನಾಲ್ಕು ದಿನಗಳ ಕಾರ್ಯಕ್ರಮ ನಡೆಸಲಾಗಿ, ಸಮೀಪದ ಕೇಂದ್ರದ ಸುಮಾರು 100 ಅಭ್ಯಾಸಿಗಳು ಲಾಭ ಪಡೆದರು.

ಕೊಲ್ಕಾತಾದ ಆಯೋಜಕ ತಂಡವು ಸಿಲಿಗುರಿ ಮತ್ತು ಬಂದೇಲ್‌ನಲ್ಲಿ ಪ್ರತ್ಯೇಕವಾಗಿ ಎರಡು ದಿನದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಏಪ್ರಿಲ್‌ನಿಂದ ಜೂನ್ ತಿಂಗಳಿನಲ್ಲಿ ರಾಣಿಗಂಜ್ ಮತ್ತು ಗ್ಯಾಂಗ್ಟಕ್‌ನಲ್ಲಿ ಇದೇ ರೀತಿಯ ಕಾರ್ಯಕ್ರಮಗಳನ್ನು ನಡೆಸಲಾಗುವುದು.



ಅಹಮದಾಬಾದಿನ ಅಡಲಜ್ ಯೋಗಾಶ್ರಮದಲ್ಲಿ, ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಿಂದ ಎಂಟು ವಲಯಗಳ ಅಭ್ಯಾಸಿಗಳಿಗಾಗಿ GITP ಯನ್ನು ನಡೆಸಲಾಯಿತು. ಗುಜರಾತ್‌ನ ವಡೋದರ ಮತ್ತು ವಲ್ಸಾಡ್ ಆಶ್ರಮಗಳಲ್ಲಿ ಅನೇಕ ಬಾರಿ ಎರಡು ದಿನಗಳ ಕಾರ್ಯಕ್ರಮಗಳನ್ನು ನಡೆಸಲಾಗಿದೆ.



ತಮಿಳುನಾಡಿನ ವಿವಿಧ ಭಾಗಗಳ ಆಯೋಜಕರು ಒಟ್ಟಾಗಿ ಉದುಮಲ್ಪೈಪೇಟ್‌ನ ಎಪ್ಪತ್ತು ಅಭ್ಯಾಸಿಗಳಿಗಾಗಿ ಸತತ ಎರಡು ಭಾನುವಾರಗಳಂದು ದಿನಚರಿ ಬರವಣಿಗೆಯ ಕುರಿತು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಜನವರಿಯಿಂದ ಮಾರ್ಚ್‌ವರೆಗೆ ಉಜ್ಜೈನ್, ವಿದಿಶಾ ಮತ್ತು ಇಂದೋರ್ ಕೇಂದ್ರಗಳೂ ಸೇರಿ, ಮಧ್ಯಪ್ರದೇಶದಲ್ಲಿ ಹತ್ತು GITP ಗಳನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮಗಳನ್ನು ಸೂಚನಾಬದ್ಧವಾಗಿ ನಡೆಸಿದ್ದು, ಅಭ್ಯಾಸಿಗಳ ಆಸಕ್ತಿಯು ಭವಿಷ್ಯದಲ್ಲಿ ಇಂತಹ ಕಾರ್ಯಕ್ರಮಗಳನ್ನು ಮತ್ತಷ್ಟು ನಡೆಸಿಕೊಡಬೇಕೆಂಬ ಪ್ರೇರಣೆ ಹುಟ್ಟಿಸಿತು.



## ರಾಜಸ್ಥಾನದ ಪಾಲಿಯಲ್ಲಿ ಕಾರ್ಯಾಗಾರ

ಮಾರ್ಚ್ 23–24, 2103ರಂದು ಪಾಲಿ ಜಿಲ್ಲೆಯ ಏಳು ಪಟ್ಟಣಗಳ 115 ಅಭ್ಯಾಸಿಗಳು ಎರಡು ದಿನಗಳ ಕಾರ್ಯಾಗಾರದಲ್ಲಿ ಭಾಗಿಯಾದರು. ಕಾರ್ಯಾಗಾರವು ಸಾಧನೆ ಮತ್ತು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳ ಮೇಲೆ ಆಧಾರಿತವಾಗಿತ್ತು. ಬೆಳಗಿನ ಸತ್ಸಂಗದ ನಂತರ ಗುರುಗಳ ವಿಡಿಯೊವನ್ನು ತೋರಿಸಲಾಯಿತು. ‘ಗುರಿ’ ವಿಷಯಧಾರಿತ ಪ್ರಸ್ತುತಿಗಳು ಮತ್ತು ಕ್ರೀಡೆಗಳನ್ನು ನಡೆಸಲಾಯಿತು. ತಂಡಗಳಲ್ಲಿ ನಡೆದ ಚಟುವಟಿಕೆಗಳಲ್ಲಿ ಅಭ್ಯಾಸಿಗಳು ತಮ್ಮ ಸಾಧನೆಯಲ್ಲಿ ತೋರಿದ ಸಮಸ್ಯೆಗಳನ್ನು ಚರ್ಚಿಸಿದರು. ಸಂಜೆಯ ಸತ್ಸಂಗದೊಂದಿ ಗೆ ಸಭೆಯು ಮುಕ್ತಾಯಗೊಂಡಿತು.

ಎರಡನೆಯ ದಿನದಂದು, ಗುರುಗಳ ವಿಡಿಯೊದೊಂದಿಗೆ ಪ್ರಾರಂಭವಾದ ಕಾರ್ಯಾಗಾರವು ಅವರ ಉಪನ್ಯಾಸಗಳು ಮತ್ತು ಹತ್ತು ನಿಯಮಗಳ ಮೇಲಿನ ಚರ್ಚೆಯೊಂದಿಗೆ ಮುಂದುವರೆಯಿತು. ಭಜನೆಗಳು ಮತ್ತು ಮುರಳೀವಾದನವು ಸೇರ್ಪಡೆಯಾಗಿದ್ದವು. ದೈನಂದಿನ ಜೀವನದಲ್ಲಿ ಗುರುಗಳ ಮೇಲಿನ ಅವಲಂಬನೆಯ ಕುರಿತ ವಿಚಾರಣೆಗಳನ್ನು ಪ್ರಶಿಕ್ಷಕರು ಸಮರ್ಥವಾಗಿ ಪರಿಹರಿಸಿದರು. ಸಂಜೆಯ ಸತ್ಸಂಗದೊಂದಿಗೆ ದಿನವು ಮುಕ್ತಾಯಗೊಂಡಿತು.

## ಪೂರ್ಣದಿನದ ಕಾರ್ಯಕ್ರಮ, ಪಮ್ಮಾರು, ಆಂ.ಪ್ರ.

ಪಮ್ಮಾರು ಗ್ರಾಮವು ಕೃಷ್ಣಾ ಜಿಲ್ಲೆಯ ಪೂರ್ವಭಾಗದಲ್ಲಿದ್ದು, ವಿಜಯವಾಡದಿಂದ 30 ಕಿ.ಮೀ. ದೂರದಲ್ಲಿದೆ. 2009 ಇಸವಿಯಲ್ಲಿ ಕೇವಲ ಎರಡು ಅಭ್ಯಾಸಿಗಳೊಂದಿಗೆ ಪ್ರಾರಂಭಗೊಂಡ ಕೇಂದ್ರವು ವೇಗವಾಗಿ ಅಭಿವೃದ್ಧಿ ಹೊಂದುತ್ತಾ, ಪ್ರಸ್ತುತ 120 ಅಭ್ಯಾಸಿಗಳನ್ನು ಪಡೆದಿದೆ.

ಮಾರ್ಚ್ 31ರಂದು ವಿಜಯವಾಡ ಕೇಂದ್ರದ ಸಹಯೋಗದೊಂದಿಗೆ ಈ ಕೇಂದ್ರದಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು 180 ಅಭ್ಯಾಸಿಗಳು ಪಾಲ್ಗೊಂಡಿದ್ದರು. ವಿಜಯವಾಡ ಕೇಂದ್ರ ಪ್ರಮುಖರಾದ ಸೋ. ಕೆ.ವಿ. ಸುಬ್ಬರಾವ್‌ರವರು ಗುರುಗಳು ಶುಕ್ರವಾರ ನೀಡುವ ಬೈಠಕನ್ನೂ ಸೇರಿ, ನಿಷ್ಠ ಸಾಧನೆಯ ಕುರಿತು ಉಪನ್ಯಾಸ ನೀಡಿದರು. ಪ್ರಶಿಕ್ಷಕರಿಲ್ಲದ ಕೇಂದ್ರಗಳ ಅಭ್ಯಾಸಿಗಳಿಗೆ ಇದು ಹೇಗೆ ಸಹಾಯಕರ ಎಂಬುದನ್ನು ಅವರು ವಿವರಿಸಿದರು. ಏಪ್ರಿಲ್‌ನಲ್ಲಿ ಬರಲಿದ್ದ ಭಂಡಾರದ ಕುರಿತು ಅನೇಕ ಅಂಶಗಳನ್ನು ಚರ್ಚಿಸಲಾಯಿತು.



## ಸಹೋದರಿಯರ ಕಾರ್ಯಕ್ರಮ, ರಾಯ್‌ಪುರ, ಛತ್ತೀಸ್‌ಗಢ

ರಾಯ್‌ಪುರ ಆಶ್ರಮದಲ್ಲಿ ಪ್ರತಿ ತಿಂಗಳ ಕೊನೆಯ ಭಾನುವಾರದಂದು, ಸೋದರಿಯರು ಕಾರ್ಯಕ್ರಮ ನಡೆಸಿಕೊಡುತ್ತಾರೆ. ಮಾರ್ಚ್ 31ರಂದು ಅವರು ‘ಮಾನವನ ವಿಕಾಸದಲ್ಲಿ ಸದ್ಗುರುವಿನ ಪಾತ್ರ’ ಪುಸ್ತಕದಿಂದ ‘ವಿಧೇಯತೆ’ ವಿಷಯವನ್ನಾಧರಿಸಿದ ಸಮೂಹ ಚರ್ಚೆಯನ್ನು ನಡೆಸಿದರು. ವಿಷಯಾರ್ಥ ಮತ್ತು ಗುರುಗಳ ಮೇಲೆ ವಿಧೇಯತೆಯನ್ನು ಹೇಗೆ ಬೆಳೆಸಿಕೊಳ್ಳಬೇಕೆನ್ನುವ ಪ್ರಶ್ನೆಗಳನ್ನು ಗಮನದಲ್ಲಿರಿಸಿ ಕಾರ್ಯಕ್ರಮವನ್ನು ರಚಿಸಲಾಗಿತ್ತು. ಪ್ರಶ್ನೆಗಳನ್ನು ಚರ್ಚಿಸಲು ಅಭ್ಯಾಸಿಗಳನ್ನು ಗುಂಪುಗಳನ್ನಾಗಿ ವಿಭಜಿಸಲಾಗಿತ್ತು. ಆಧ್ಯಾತ್ಮಿಕ ಪ್ರಗತಿಗಾಗಿ ವಿಧೇಯತೆ ಅತ್ಯಗತ್ಯ ಮತ್ತು ವಿಧೇಯರಾಗಲು ಹತ್ತು ನಿಯಮಗಳನ್ನು ಪಾಲಿಸಬೇಕಾಗುವುದೆಂಬ ತೀರ್ಮಾನವನ್ನು ಚರ್ಚೆಯ ಕೊನೆಗೆ ಕೈಗೊಳ್ಳಲಾಯಿತು. ಈ ಕಾರ್ಯಕ್ರಮವು ಅಭ್ಯಾಸಿಗಳಲ್ಲಿ ಪುನರುತ್ಸಾಹವನ್ನು ತಂದಿತು.

## ಪೂರ್ಣ ದಿನದ ಕಾರ್ಯಕ್ರಮ, ಭಿಲ್ವಾರ, ರಾಜಸ್ಥಾನ

ಭಿಲ್ವಾರದಲ್ಲಿ ಮಾರ್ಚ್ 3ರಂದು ನಡೆದ ಕಾರ್ಯಕ್ರಮವು 132 ಅಭ್ಯಾಸಿಗಳು ಪಾಲ್ಗೊಂಡ ಸತ್ಸಂಗದೊಂದಿಗೆ ಪ್ರಾರಂಭವಾಯಿತು. ಶಾಹಜಹಾನಪುರದಲ್ಲಿ ನಡೆದ ಹಿಂದಿ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಹೋದರಿಯೊಬ್ಬರು ತಮ್ಮ ಅನುಭವವನ್ನು ಹಂಚಿಕೊಂಡರು.

‘ಭಂಡಾರ’ ವಿಷಯದ ಮೇಲೆ ಯುವಕರು ಕಿರು ನಾಟಕವನ್ನು ಪ್ರಸ್ತುತಗೊಳಿಸಿದರು. ಅದರಲ್ಲಿ ಜೀವನವು ಆಯ್ಕೆಗಳ ಸರಣಿ ಮತ್ತು ಸರಿಯಾದ ಆಯ್ಕೆ ಮುಖ್ಯ ಎಂದು ತೋರಿಸಲಾಯಿತು. ಪ್ರತಿಸ್ಪಂದನ ಕಾರ್ಯಕ್ರಮದಲ್ಲಿ ಅಭ್ಯಾಸಿಗಳು ಭಂಡಾರದ ಕುರಿತ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದರು. ಭಂಡಾರಗಳು ವಿಶೇಷವಾಗಿ ಅನುಗ್ರಹಿತ ದಿನಗಳಾಗಿದ್ದು ಅದರಲ್ಲಿ ಪಾಲ್ಗೊಂಡವರಿಗೆ ಪ್ರೇಮ ಮತ್ತು ಭ್ರಾತೃತ್ವವನ್ನು ಬೆಳೆಸಿಕೊಳ್ಳುವ ಅವಕಾಶ ದೊರೆಯುತ್ತದೆ ಎಂದು ಗಮನಿಸಲಾಯಿತು. ವಿಸ್ಪರ್ಸ್‌ನಿಂದ ಭಂಡಾರಕ್ಕೆ ಸಂಬಂಧಿತ ಸಂದೇಶಗಳನ್ನು ಓದಲಾಯಿತು, ತದನಂತರ ವಿಡಿಯೋವನ್ನು ತೋರಿಸಲಾಯಿತು. ಸತ್ಸಂಗದೊಡನೆ ಕಾರ್ಯಕ್ರಮವು ಸಮಾಪ್ತಿಯಾಯಿತು.






## ಯುವಕರ ಕಾರ್ಯಕ್ರಮ; ನಾಸಿಕ್, ಮಹಾರಾಷ್ಟ್ರ

24 ನೇ ಮಾರ್ಚರಂದು, "ನೇತೃತ್ವ" ಎಂಬ ವಿಷಯದ ಮೇಲೆ, ಸುಮಾರು 25 ಸಹಭಾಗಿಗಳಿಗಾಗಿ, ಆರ್ಟಿಲರಿ ಸೆಂಟರ್ ನಾಸಿಕ್‌ನಲ್ಲಿ ಸೇನಾಧಿಕಾರಿಗಳಾದ ಲೆ. ಕರ್ನಲ್ ಸುಧೀರ್ ಪರಾಶರ್ ಅವರಿಂದ ನಿರ್ವಹಿಸಿಕೊಳ್ಳಲಾಯಿತು. ಪ್ರತಿಯೊಬ್ಬ ಸಹಭಾಗಿಯು ನಾಯಕನಾಗಿರುವುದು, ಮತ್ತು ನಿಜವಾದ ನೇತೃತ್ವಕ್ಕೆ ಬೇಕಾದ ಗುಣಮಟ್ಟಗಳ ಬಗ್ಗೆ ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. ತನ್ನನ್ನೇ ಉದಾಹರಣೆಯನ್ನಾಗಿಸಿಕೊಳ್ಳುವವನೇ ನಿಜವಾದ ಹಾಗು ಪರಿಣಾಮಕಾರಕ ನಾಯಕನಾಗಬಲ್ಲನೆಂಬ ವಿಚಾರವನ್ನು ವ್ಯಕ್ತಪಡಿಸಲಾಯಿತು. ತದನಂತರ, ಸೇನಾದಳದ ನೇತೃತ್ವದಿಂದ ಕಲಿತುಕೊಳ್ಳಬಹುದಾದ ಪಾಠಗಳ ಬಗ್ಗೆ ಮಾಹಿತಿಯನ್ನು ಪ್ರಸ್ತುತಪಡಿಸಲಾಯಿತು.

ಗುರುಗಳು, ಸಹಜಮಾರ್ಗದ ಯುವಕರು ಜಾಗತಿಕ ಸಮುದಾಯಕ್ಕಾಗಿ, ಶಾಂತಿ, ಐಕ್ಯತೆ ಹಾಗು ಶಾಂತಿಯುತ ಸಹಜೀವನಕ್ಕೆ ಹೇಗೆ ಕೈದೀಪವಾಗಿರಬೇಕೆಂದು ಬಯಸುತ್ತಾರೆಂಬುದನ್ನು ತಿಳಿಸಿಕೊಡಲಾಯಿತು. ಪ್ರೇರಣಾದಾಯಕ ವಿಡಿಯೋ ತುಣುಕುಗಳು ಹಾಗು ನಿಜಜೀವನದಲ್ಲಿಯ ಉದಾಹರಣೆಗಳು, ಅಳಿಸಲಾರದ ಪ್ರಭಾವವನ್ನುಂಟುಮಾಡಿದವು. ನಾಯಕನಾದವನು ಕೇವಲ ದಾರಿಯನ್ನು ತೋರಿಸುವವನಷ್ಟೇ ಅಲ್ಲದೇ ಆ ದಾರಿಯಲ್ಲಿ ನಡೆಯುವವನು ಮತ್ತು ಕೊನೆಗೆ ತಾನೇ ದಾರಿಯಾಗಿಬಿಡುವವನೆಂಬ ಗುರುಗಳ ಶಬ್ದಗಳನ್ನು ನೆನೆಸಿಕೊಂಡರು. ಅವರು ಗುರುಗಳ ನಿರೀಕ್ಷೆಯ ಮೇರೆಗೆ ತಮ್ಮ ಜೀವನವನ್ನು ಸಾಗಿಸುವುದಾಗಿ ನಿರ್ಧರಿಸಿದರು.

## ಯುವಕರ ಕಾರ್ಯಕ್ರಮ, ಪಶ್ಚಿಮ ಬಂಗಾಳ

ಕೊಲಕತ್ತಾ ಕೇಂದ್ರವು ಮಾರ್ಚ್ 17ರಂದು 15 ಅಭ್ಯಾಸಿಗಳಿಗಾಗಿ ಯುವಕರ ಕಾರ್ಯಕ್ರಮವನ್ನು ಆಯೋಜಿಸಿತು. ಕಾರ್ಯಕ್ರಮದ ಉದ್ದೇಶ, ನಂತರ ಸಹಭಾಗಿಗಳ ಪರಸ್ಪರ ಪರಿಚಯಮಾಡಿಸಲಾಯಿತು. 'ಜೀವನದ ಆವಶ್ಯಕತೆ ಹಾಗು ಬೇಡಿಕೆಗಳು' ಎಂಬ ವಿಷಯದ ಮೇಲಿನ ಗುರುಗಳ ಭಾಷಣದ ಪ್ರತಿಗಳನ್ನು ಸಹಭಾಗಿಗಳಿಗೆ ಕೊಡಲಾಯಿತು. ನಂತರ ಅವರಿಗೆ ಈ ಭಾಷಣದಿಂದ ತಮಗೆ ತಿಳಿದದ್ದನ್ನು ಹಂಚಿಕೊಳ್ಳಲು ಪ್ರೇರೇಪಿಸಲಾಯಿತು. ಚರ್ಚೆಯ ಮಹತ್ವದ ಸ್ವರೂಪವೆಂದರೆ, ಆವಶ್ಯಕತೆ ಹಾಗು ಬೇಡಿಕೆಗಳಲ್ಲಿಯ ವ್ಯತ್ಯಾಸ, ಆವಶ್ಯಕತೆಗಳ ಪ್ರಕಾರ; ಉದಾ – ದೈಹಿಕ, ಭಾವನಿಕ ಮತ್ತು ಮಾನಸಿಕ. ಪ್ರತಿಯೊಬ್ಬನೂ ಹೇಗೆ ಆವಶ್ಯಕತೆಗಳಿಂದ ಬೇಡಿಕೆಗಳ ಕಡೆಗೆ ಹರಿದು ಹೋಗುತ್ತಾನೆ, ಮತ್ತು ಸಹಜಮಾರ್ಗವು, ದೇವರೊಂದಿಗೆ ಜೋಡಿಸುವದಕ್ಕಾಗಿ ಹೇಗೆ ಆವಶ್ಯಕತೆಗಳನ್ನು ಪೂರೈಸಬಲ್ಲದು, ಎಂಬುದಾಗಿತ್ತು.

## ಗೃಹಸಭೆ, ಗೌಹಾತಿ, ಆಸ್ಸಾಂ

ಗೌಹಾತಿ ಕೇಂದ್ರದ 37 ಯುವ ಅಭ್ಯಾಸಿಗಳು, ಒಂದು ಸಭೆಗಾಗಿ ಒಬ್ಬ ಅಭ್ಯಾಸಿಯ ಮನೆಯಲ್ಲಿ ಕೂಡಿಕೊಂಡರು. ಸತ್ಸಂಗದ ನಂತರ, ಗೌಹಾತಿಯಲ್ಲಿಯ ಸ್ವಯಂಸೇವಕರ ಕೆಲಸಗಳ ಬಗ್ಗೆ ಚರ್ಚಿಸಲಾಯಿತು. ಮತ್ತು 2012 ನೇ ವರ್ಷದಲ್ಲಿಯ ಪ್ರಭಂದ ಕಾರ್ಯಕ್ರಮದ ಬಗ್ಗೆ ಪರಿಶೀಲಿಸಲಾಯಿತು. ಶೈಕ್ಷಣಿಕ ಸಂಸ್ಥೆಗಳಿಗೆ, ಮುಂಬರುವ ಪ್ರಬಂಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೇರೇಪಿಸಲು ಕೈಗೊಳ್ಳಬೇಕಾದ ಆವಶ್ಯಕ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಆಶ್ರಮವನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳಲು, ನಿಯಮಿತವಾಗಿ ಮುಕ್ತ ಸಭೆಗಳನ್ನು ಆಯೋಜಿಸುವುದು, ಹೊಸ ಅಭ್ಯಾಸಿಗಳಿಗೆ ಸಾಧನೆಯ ಬಗ್ಗೆ ಸ್ಪಷ್ಟೀಕರಣದ ಸತ್ರಗಳನ್ನು ಪ್ರತಿ ತಿಂಗಳು ನೆರವೇರಿಸಬೇಕೆಂದು ನಿರ್ಧರಿಸಲಾಯಿತು.

ಈ ಸಭೆಯಲ್ಲಿ, ನಮ್ಮ ಉನ್ನತಿಗಾಗಿ, ಗುರುಗಳ ಕಾರ್ಯದಲ್ಲಿ ಸಹಭಾಗಿಯಾಗುವ ಆವಶ್ಯಕತೆಯ ಬಗ್ಗೆ ಚರ್ಚಿಸಲಾಯಿತು. ಗುರುಗಳ ಕಾರ್ಯದಲ್ಲಿ ಸಹಭಾಗಿಯಾಗುವುದರಿಂದ, ಸಹನೆ, ಬಾಂಧವ್ಯ, ಆಜ್ಞಾಪಾಲನೆಗಳನ್ನು ಕಲಿ



ತುಕೊಳ್ಳಬಹುದು, ಹಾಗು ನಮಗೆ ಅರಿವಿಲ್ಲದಂತೆಯೇ ನಮ್ಮ ಆಧ್ಯಾತ್ಮಿಕ ಪ್ರವಾಸದಲ್ಲಿ ಮಹತ್ವದ್ದಾಗಿರುವ ಸತತ ಸ್ಮರಣೆಯಲ್ಲಿಯೇ ಕೆಲಸ ಮಾಡುತ್ತಿರುತ್ತೇವೆ. ಈ ಸಭೆಯು ಎಲ್ಲಾ ಅಭ್ಯಾಸಿಗಳಲ್ಲಿ ಬಲವಾದ ಸಹೋದರ ಭಾವನೆಯನ್ನುಂಟುಮಾಡಿತು.

## ಯುವಕರ ಸಭೆ, ಭಿಲವಾಡಾ, ರಾಜಸ್ಥಾನ.



ಮಾರ್ಚ್ 24 ರಂದು ಯುವಕರ ಸಭೆಯಲ್ಲಿ "ಗುರಿ" ಎಂಬ ವಿಷಯಕ್ಕಾಗಿ 16 ಅಭ್ಯಾಸಿಗಳು ಹಾಜರಿದ್ದರು. ಈ ಪ್ರಶ್ನೋತ್ತರಗಳ ಸತ್ರದಲ್ಲಿ, ಮಾನವ ಜೀವನದ ಗುರಿ, ಆಧ್ಯಾತ್ಮಿಕ ಸಾಧನೆಯಲ್ಲಿ ಗುರುವಿನ ಮಹತ್ವ, ಧ್ಯಾನ, ಶುದಿಧ್ಕರಣದ ಪ್ರಕ್ರಿಯೆ, ರಾತ್ರಿಯ ಪ್ರಾರ್ಥನೆ ಹಾಗು ಸತತ ಸ್ಮರಣೆಯ ಮಹತ್ವಗಳ ಬಗ್ಗೆ ಚರ್ಚೆಗೆ ಅವಕಾಶ ಕೊಡಲಾಯಿತು. ಸಹಜ ಮಾರ್ಗದ ಮೂಲ ತತ್ವಗಳು ಎಂಬ ಪುಸ್ತಕದಲ್ಲಿಯ ಆರಿಸಿಕೊಂಡ ಭಾಗಗಳನ್ನು ಓದಲಾಯಿತು.

ನಮ್ಮ ತಿಳುವಳಿಕೆ ಹಾಗು ಪ್ರತ್ಯಕ್ಷ ವಸ್ತುಸ್ಥಿತಿ ಇವುಗಳ ನಡುವಿನ ಅಂತರವನ್ನು ತುಂಬಿಸುವುದು ಈ ಚರ್ಚೆಯ ಉದ್ದೇಶವಾಗಿತ್ತು.

ಯುವಕರ ಸಭೆಯು ಮಾರ್ಚ ತಿಂಗಳ ಕೊನೆಯ ರವಿವಾರದಂದು ಸತ್ಸಂಗದ ನಂತರ ನೆರವೇರಿಸಲಾಗಿತ್ತು. ಮಿಷನ್ನಿನ ಚಟುವಟಿಕೆಗಳಲ್ಲಿ ಯುವಕರ ಸಹಭಾಗವನ್ನು ಹೆಚ್ಚಿಸುವುದು ಹೇಗೆ, ಎಂದು ಚರ್ಚಿಸಲು ಹದಿಮೂರು ಅಭ್ಯಾಸಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಈ ಅಭ್ಯಾಸಿಗಳು ಪ್ರತಿ ರವಿವಾರ ಸತ್ಸಂಗದ ನಂತರ ಕೆಲ ಸಮಯ ನಿಲ್ಲುವುದಾಗಿ ನಿರ್ಧರಿಸಿದರು. ಅವರು ನಿಯಮಿತ ವಾಗಿರದ ಕೆಲ ಅಭ್ಯಾಸಿಗಳಿಗೆ ಭೇಟಿಮಾಡುವರು, ಮತ್ತು ಇಂತಹ ಭೇಟಿಗಳು ಆ ಅಭ್ಯಾಸಿಗಳಿಗೆ ಸಹಜಮಾರ್ಗಕ್ಕೆ ಪರಿಚಯಿಸಿದವರ ಸಹಾಯದೊಂದಿಗೆ ಮಾಡುವ ಯೋಜನೆ ಮಾಡಲಾಯಿತು. ಇದು ಅಂತಹ ಅಭ್ಯಾಸಿಗಳ ಸಾಧನೆಯಲ್ಲಿಯ ತೊಂದರೆಗಳನ್ನು ಸರಿಪಡಿಸಿ ಅವರ ಸಾಧನೆಯನ್ನು ಉತ್ಸಾಹದೊಂದಿಗೆ ಮುಂದುವರಿಸುವಲ್ಲಿ ಸಹಾಯಕವಾದೀತೆಂಬ ನಿರೀಕ್ಷೆಯಿದೆ.

## ಹೊಸ ಪ್ರಕಟನೆಗಳು



ಹಾರ್ಟ್‌ಸ್ಪೀಕ್ 2010
ತೆಲುಗು
ತಮಿಳು
ಮರಾಠಿ
ಮಲಯಾಳಂ
ಕನ್ನಡ
ಹಿಂದಿ
ಗುಜರಾತಿ

## ಹೊಸನೇಮಕಾತಿಗಳು


ಸೋ. ಜನನಿ ಸುಬ್ರಮಣಿಯನ್

ವ್ಯವಸ್ಥಾಪಕಿ, HRD, ಮಿಷನಿನ ಮುಖ್ಯಾಲಯ.


ಸೋ. ಇಂದುಶೇಖರನ್ ವಿ. ಪಿಳ್ಳೈ

ಕೇಂದ್ರ ಪ್ರಮುಖರು, ತಿರುವನಂತಪುರಂ ಕೇಂದ್ರ.

---



ವಿಸ್ಪರ್ಸ್ ಫ್ರಂ ದಿ ಬ್ರೈಟರ್ ವರ್ಲ್ಡ್
ಎ ಫಿಫ್ತ್ ರಿವಿಲೇಶನ್



ಮೈ ಮಾಸ್ಟರ್
ತಮಿಳು, ಹಿಂದಿ



ಮಾನವ ವಿಕಾಸದಲ್ಲಿ ಸದ್ಗುರುವಿನ ಪಾತ್ರ
ಕನ್ನಡ, ಮರಾಠಿ, ಮಲಯಾಳಂ




ಹಾರ್ಟ್‌ಸ್ಪೀಕ್ 2012
ಆಂಗ್ಲ





ಹೃದಯವಾಣಿ 2008


---




ಡೌನ್ ಮೆಮೊರಿ ಲೇನ್
ಭಾಗ 1 ತೆಲುಗು





ಕಂಪ್ಲೀಟ್ ವರ್ಕ್ಸ್ ಆಫ್ ರಾಮಚಂದ್ರ
(ಲಾಲಾಜಿ ಮಹಾರಾಜರು) ಭಾಗ 2




ದ ಸ್ಪೈಡರ್ಸ್ ವೆಬ್
ಭಾಗ 2 ಆಂಗ್ಲ





ಪ್ರೊಸೀಡಿಂಗ್ಸ್ ಆಫ್ ದ
ಫಸ್ಟ್ ಕ್ರೆಸ್ಟ್ ಸೆಮಿನಾರ್
ಆಂಗ್ಲ





ರೋಲ್ ಆಫ್ ದ ಮಾಸ್ಟರ್ ಇನ್ ಹ್ಯೂಮನ್
ಎವಲ್ಯುಶನ್ ಎಂಪಿ3–ಆಂಗ್ಲ

---





ಕಾಲ್ ಆಫ್ ದ ಡಿವೈನ್
ಡಿವಿಡಿ – ಆಂಗ್ಲ





ಲೈಫ್ ಆಫ್ ಬಾಬೂಜಿ
ಡಿವಿಡಿ – ಹಿಂದಿ





ಜರ್ನಿ ಇನ್ ಟು ದ ಹಾರ್ಟ್
ಡಿವಿಡಿ – ಆಂಗ್ಲ




ಹಾರ್ಟ್‌ಸ್ಪೀಕ್ 2011 ಡಿವಿಡಿ
– ಆಂಗ್ಲ





ದ ಹಾರ್ಟ್ ಆಫ್ ಲವ್
ಡಿವಿಡಿ – ಆಂಗ್ಲ





ಸತ್ಖೋಲ್– ಹೆವನ್ ಆನ್
ಅರ್ಥ್ ಡಿವಿಡಿ – ಆಂಗ್ಲ


---





ಮೊಮೆಂಟ್ಸ್ ವಿಥ್ ದ ಬಿಲವೆಡ್
ಡಿವಿಡಿ – ಆಂಗ್ಲ




ಮೆಸೇಜ್ ಆಫ್ ದ ಹಾರ್ಟ್
ಡಿವಿಡಿ – ಆಂಗ್ಲ




ಲವ್ ಆಂಡ್ ಡೆತ್ ಎಂಪಿ3 –




ಮೈ ಮಾಸ್ಟರ್ ಎಂಪಿ3 – ಆಂಗ್ಲ,
ಹಿಂದಿ, ತಮಿಳು




ಹಾರ್ಟ್‌ಸ್ಪೀಕ್ 2007 ಎಂಪಿ3 –
ಆಂಗ್ಲ

# ಅಮಲಾಪುರ ಆಶ್ರಮ, ಆಂಧ್ರ ಪ್ರದೇಶ

## ಪ್ರಭಾಕೇಂದ್ರ



ಪೂರ್ವ ಗೋದಾವರಿ ಜಿಲ್ಲೆಯಲ್ಲಿಯ ಅಮಲಾಪುರವು ಮಧ್ಯಮ ಸ್ತರದ ಪಟ್ಟಣವಾಗಿದ್ದು, ರಾಜಮಂಡ್ರಿ ನಗರದಿಂದ 60 ಕಿ.ಮೀ. ದೂರದಲ್ಲಿದೆ. ಕಾಕೀನಾಡ ಮತ್ತು ರಾಜಮಂಡ್ರಿ ಇವು ಅಮಲಾಪುರಕ್ಕೆ ಜೋಡಿಸುವ ಎರಡು ನಗರಗಳಾಗಿವೆ. ಈ ಆಶ್ರಮವು ಭಾರತದಲ್ಲಿಯು ಹಳೆಯ ಆಶ್ರಮಗಳಲ್ಲೊಂದಾಗಿದ್ದು, ಆಂಧ್ರ ಪ್ರದೇಶದಲ್ಲಿ ಕಟ್ಟಲಾದ ಆಶ್ರಮಗಳಲ್ಲಿ ಮೂರನೇಯದಾಗಿದೆ. ಇದು ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಆಧ್ಯಾತ್ಮಿಕ ಕೇಂದ್ರವಾಗಿದೆ.

1969 ರಲ್ಲಿ ಮಿಷನ್ನಿಗೆ ಸೇರಿಕೊಂಡ ಶ್ರೀ ಪಿ. ಬಿ. ರಾಮುಡು, ಎಂಬ ಅಭ್ಯಾಸಿಯು 1971 ರಲ್ಲಿ ತನ್ನ ಗೆಳೆಯ ಡಾ.ಅಪ್ಪಾರಿ ರಾಮಕೃಷ್ಣ ಎಂಬುವವರನ್ನು ಈ ಮಾರ್ಗಕ್ಕೆ ಪರಿಚಯಿಸಿದಾಗಿನಿಂದ, ಈ ಕೇಂದ್ರವು ಅಸ್ತಿತ್ವಕ್ಕೆ ಬಂದಿತು. ನಂತರ ಅವರು (ಅಪ್ಪಾರಿಯವರು) ಈ ಕೇಂದ್ರದ ಮೊದಲನೇಯ ಪ್ರಶಿಕ್ಷಕರಾಗಿದ್ದು, ಸಾಪ್ತಾಹಿಕ ಸತ್ಸಂಗಗಳು ಇವರ ಮನೆಯಲ್ಲಿಯೇ ನಡೆಸಲಾಗುತ್ತಿತ್ತು. ಅಲ್ಲಿ ಸುಮಾರು 15–20 ಅಭ್ಯಾಸಿಗಳು ಉಪಸ್ಥಿತರಿರುತ್ತಿದ್ದರು. ಇವರು, 484 ಚ.ಗಜದ ಜಮೀನಿನಲ್ಲಿ ಆಶ್ರಮವನ್ನು ಕಟ್ಟಲು ಅಮಲಾಪುರ ಪುರಸಭೆಗೆ ಪ್ರಸ್ತಾಪವನ್ನು ಮಾಡಿದರು. ಪೂಜ್ಯ ಬಾಬೂಜಿಯವರಿಂದ ಅನುಮತಿ ಪಡೆದ ನಂತರ, ಅಭ್ಯಾಸಿಗಳು ನೀಡಿದ ಉದಾರ ದೇಣಿಗೆಗಳ ಸಹಾಯದಿಂದ ಈ ಜಮೀನನ್ನು ಕೊಂಡುಕೊಳ್ಳಲಾಯಿತು. ಇದು ಸರಕಾರಿ ಬಸ ಸಂಕೀರ್ಣದಿಂದ ಒಂದು ಕಿ.ಮೀ.ದೂರದಲ್ಲಿದೆ.

ನಂತರ, 10ನೇ ಮಾರ್ಚ್ 1982ರಂದು ಕೇಂದ್ರ ಪ್ರಮುಖರಾದ ಶ್ರೀ ವಿ.ಪಿ.ಡಿ. ನಾಗೇಶ್ವರರವರು ಈ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿದರು. ಕಟ್ಟಡದ ನಿರ್ಮಾಣ ಕಾರ್ಯವು 18 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಯಿತು. ಪೂಜ್ಯ ಬಾಬೂಜಿ ಮಹಾರಾಜರಿಂದ,"ಈ ಕಟ್ಟಡದ ಉದ್ಘಾಟನೆಯನ್ನು ಮಾಡಲಾಗಿದೆ ಹಾಗು ಉಪಯೋಗಕ್ಕೆ ಸಿದ್ಧವಾಗಿದೆ" ಎಂಬ ಸಮಾಚಾರವನ್ನು ಪಡೆದ ನಂತರ, ಅಭ್ಯಾಸಿಗಳು ಈ ಸ್ಥಳವನ್ನು ಧ್ಯಾನಕ್ಕಾಗಿ ಉಪಯೋಗಿಸಲು ಪ್ರಾರಂಭಿಸಿದರು. ನಂತರ ಸೋ. ಕಸ್ತೂರಿಯವರಿಂದ ಈ ಕೆಂದ್ರಕ್ಕೆ ತಮ್ಮ ಭೇಟಿಯ ವೇಳೆಯಲ್ಲಿ ಔಪಚಾರಿಕವಾಗಿ ಉದ್ಘಾಟಿಸಲಾಯಿತು.

ಧ್ಯಾನಮಂದಿರದ ಆಕಾರ 22X32 ಅಡಿಯಾಗಿದ್ದು, ಇದರಲ್ಲಿ ಒಂಬತ್ತು ಅಡಿಯ ಪಡಸಾಲೆಯೂ ಒಳಗೊಂಡಿದೆ. ಇದರ ಎಲ್ಲಾ ನಾಲ್ಕು ಮೂಲೆಗಳಲ್ಲಿ ನಾಲ್ಕು ಬಾಗಿಲುಗಳಿವೆ, ಹಾಗು ಮೊದಲನೆಯ ಮಹಡಿಯ ಮೇಲೆ ಎರಡು ಕೋಣೆಗಳಿವೆ. ಸಧ್ಯಕ್ಕೆ ಈ ಕೋಣೆಗಳನ್ನು ಮಕ್ಕಳ ಕೇಂದ್ರ, ವಾಚನಾಲಯ ಹಾಗು ಆಶ್ರಮದ ಕಾರ್ಯಾಲಯಗಳನ್ನಾಗಿ ಉಪಯೋಗಿಸಲಾಗುತ್ತಿದೆ.

2010–2011 ರಲ್ಲಿ ಗುರುಗಳ ಅನುಮತಿ ಹಾಗು ವಿಭಾಗ ಪ್ರಮುಖರಾದ ಸಹೋದರ ಮಧು ಕೋಥಪಲ್ಲಿಯವರ ಸಹಕಾರದಿಂದ ಅಡುಗೆಮನೆ ಹಾಗು ಸ್ವಚ್ಛತಾಗೃಹಗಳನ್ನು ಜೋಡಿಸಿ ನೂತನೀಕರಿಸಲಾಯಿತು. ಇಲ್ಲಿ ರವಿವಾರದ ಸತ್ಸಂಗದಲ್ಲಿ ಸುಮಾರು ಎಂಬತ್ತು ಅಭ್ಯಾಸಿಗಳು ಉಪಸ್ಥಿತರಿರುತ್ತಾರೆ ಈ ಆಶ್ರಮದಲ್ಲಿ ಪ್ರತಿ ಎರಡನೇಯ ರವಿವಾರದಂದು ಪೂರ್ಣದಿನದ ಕಾರ್ಯಕ್ರಮವಿರುತ್ತದೆ. ಈ ಕೇಂದ್ರದಲ್ಲಿ ಇಬ್ಬರು ಪ್ರಶಿಕ್ಷಕರಿದ್ದಾರೆ.

ಈ ಆಶ್ರಮವು ರಾಜೋರಿ, ಜಗ್ಗನ್ನಪೇಟ, ನರಸಾಪುರ ಮತ್ತು ಯಾಣಮ್‌ನಂತಹ ಉಪಕೇಂದ್ರಗಳಿಗೆ ಸಮೀಪದಲ್ಲಿದೆ. 16 ನೇ ಎಪ್ರಿಲ್ 1986 ರಂದು ಗುರುಗಳು ತಮ್ಮ ಪತ್ನಿ ಸ. ಸುಲೋಚನಾರವರೊಂದಿಗೆ ಈ ಆಶ್ರಮಕ್ಕೆ ಭೇಟಿನೀಡಿ ಎರಡು ದಿನ ತಂಗಿದ್ದರು.






To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org
© 2013 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.